# ರಾಷ್ಟ್ರೀಯ ಹಸಿರು ಪಡೆ

## ಕೈಪಿಡಿ





ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಪ.ನಿ.ನೀ.ಸಂ.ಸಂ)
ಬೆಂಗಳೂರು




ರಾಜ್ಯದಲ್ಲಿ “ರಾಷ್ಟ್ರೀಯ ಹಸಿರು ಪಡೆ” ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಪನಿನೀಸಂಸಂಗೆ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ಪ್ರಶಸ್ತಿ.




ಗದಗ ಜಿಲ್ಲೆಯ ಗೊಜನೂರಿನ ಸರ್ಕಾರಿ ಪ್ರೌಢಶಾಲೆಗೆ ರಾಷ್ಟ್ರ ಮಟ್ಟದ ಅತ್ಯುತ್ತಮ ಪರಿಸರಕೂಟ ವಿಭಾಗದಲ್ಲಿ ಸಮಾಧಾನಕರ ಪ್ರಶಸ್ತಿ



**ಶ್ರೀ ರಾಜ್ ಕಿಶೋರ್ ಸಿಂಗ್** ಭಾ.ಅ.ಸೇ
ಮಹಾನಿರ್ದೇಶಕರು
ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ
ಬೆಂಗಳೂರು

## ಪ್ರಸ್ತಾವನೆ

ಕರ್ನಾಟಕ ಸರ್ಕಾರದ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಧೀನದಲ್ಲಿರುವ ಸ್ವಾಯತ್ತ ಸಂಸ್ಥೆಯಾಗಿರುವ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಪ.ನಿ.ನೀ.ಸಂ.ಸಂ) ಯು ಪರಿಸರಕ್ಕೆ ಸಂಬಂಧಿಸಿದ ಹಲವಾರು ಅಂಶಗಳ ಮೇಲೆ ಅಧ್ಯಯನಗಳನ್ನು ನಡೆಸುತ್ತಲಿದ್ದು, ಪರಿಸರ ಮತ್ತು ನೀತಿ ವಿಷಯಗಳ ಕುರಿತು ಸರ್ಕಾರ, ಸರ್ಕಾರೇತರ ಸಂಸ್ಥೆ ಮತ್ತು ಇತರ ಸಂಸ್ಥೆಗಳಿಗೆ ಸಾಮರ್ಥ್ಯ, ಬೆಳವಣಿಗೆ ಮತ್ತು ತಾಂತ್ರಿಕ ಬೆಂಬಲವನ್ನು ಒದಗಿಸುತ್ತಿದೆ. ಸಂಸ್ಥೆಯು ಪರಿಸರ ನಿರ್ವಹಣೆ ಕ್ಷೇತ್ರದಲ್ಲಿ ಸಲಹಾ ಸೇವೆಯನ್ನು ನೀಡುತ್ತಾ ಬಂದಿದ್ದು, ಪರಿಸರ ಸಂರಕ್ಷಣೆಯ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ ಮತ್ತು ಮಾನವ ಮತ್ತು ನಿಸರ್ಗದ ನಡುವೆ ಸಾಮರಸ್ಯದ ಪರಿಸರ ನಿರ್ಮಿಸುವಲ್ಲಿ ಸಮಾಜವನ್ನು ಪ್ರೇರೇಪಿಸುವ, ಸಬಲಗೊಳಿಸುವ ಬೌದ್ಧಿಕ ಕೇಂದ್ರವಾಗುವ ದೂರ ದೃಷ್ಟಿ ಹೊಂದಿದೆ.

ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವು ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಪ್ರಮುಖ ಉಪಕ್ರಮವಾಗಿದ್ದು, ಶಾಲಾ ಮಕ್ಕಳನ್ನು ಗುರಿಯಾಗಿಸಿಕೊಂಡು, 'ಆರಂಭಿಕ ಪಾಲ್ಗೊಳ್ಳುವಿಕೆ' ಪರಿಸರ ಸಂರಕ್ಷಣಾ ಜಾಗೃತಿಯ ಬೀಜಗಳನ್ನು ಬಿತ್ತನೆ ಮಾಡಲು ದೇಶಾದ್ಯಂತ ಜನಸಾಮಾನ್ಯರನ್ನು ಆಹ್ವಾನಿಸಲು ಆಶಿಸುತ್ತಿದೆ. ಶಾಲೆಯಿಂದ ಸಮಾಜಕ್ಕೆ ಎಂಬ ಪರಿಕಲ್ಪನೆಯೊಂದಿಗೆ ಪ್ರಾರಂಭವಾಗಿ ಶಾಲೆಯಿಂದ ಹಳ್ಳಿಗೆ, ಹಳ್ಳಿಯಿಂದ ನಗರಕ್ಕೆ, ರಾಜ್ಯದಿಂದ ದೇಶಕ್ಕೆ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವ ಗುರಿ ಹೊಂದಿದೆ. ಈ ಗುರಿಯನ್ನು ಪೂರೈಸುವ ಸಲುವಾಗಿ ನಮ್ಮ ಯುವ ಮನಸ್ಸನ್ನು ಪ್ರೇರೇಪಿಸಲು ಮತ್ತು ಉತ್ತೇಜಿಸಲು ದೇಶಾದ್ಯಂತ ಶಾಲೆಗಳಲ್ಲಿ ಇಕೋ-ಕ್ಲಬ್‌ಗಳನ್ನು ಸ್ಥಾಪಿಸಲಾಗಿದೆ.

ಪ.ನಿ.ನೀ.ಸಂ.ಸಂಯು 2009 ರಿಂದ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಕರ್ನಾಟಕದ ನೋಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ರಾಜ್ಯದ 16850 ಶಾಲೆಗಳಲ್ಲಿ ರಾಷ್ಟ್ರೀಯ ಹಸಿರು ಪಡೆ – ಇಕೋ-ಕ್ಲಬ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಸಮಗ್ರ ಮಾಹಿತಿಯನ್ನು ಒದಗಿಸುವ ಈ ಕಿರು ಕೈಪಿಡಿಯು, ಈ ಕಾರ್ಯಕ್ರಮದ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಜೊತೆಗೆ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಿಗೆ, ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಕಾರ್ಯಕ್ರಮವನ್ನು ಶಾಲೆಗಳಲ್ಲಿ ಉತ್ತಮವಾಗಿ ಅನುಷ್ಠಾನಗೊಳಿಸುವಲ್ಲಿ ಸಹಾಯಕವಾಗುವುದು.

ಬನ್ನಿ, ರಾಷ್ಟ್ರೀಯ ಹಸಿರು ಪಡೆಯೊಂದಿಗೆ ಕೈ ಜೋಡಿಸಿ ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸೋಣ

# ಪರಿವಿಡಿ


| ಕ್ರ.ಸಂ | ವಿವರ | ಪುಟ ಸಂಖ್ಯೆ |
|---|---|---|
| 1 | ರಾಷ್ಟ್ರೀಯ ಹಸಿರು ಪಡೆ | 1 |
| 1.1 | ಪರಿಚಯ | 1 |
| 1.2 | ಕಾರ್ಯಕ್ರಮದ ಉಗಮ | 1 |
| 1.3 | ಉದ್ದೇಶಗಳು | 2 |
| 1.4 | ಸದಸ್ಯತ್ವ | 2 |
| 2 | ಕಾರ್ಯಕ್ರಮ ಅನುಷ್ಠಾನದ ವಿಧಾನ | 3 |
| 2.1 | ಶಾಲೆಗಳ ಆಯ್ಕೆಯ ಮಾನದಂಡ | 3 |
| 2.2 | ಆರ್ಥಿಕ ಅನುದಾನ | 3 |
| 3 | ರಾಷ್ಟ್ರೀಯ ಹಸಿರು ಪಡೆ–ಇಕೋಕ್ಲಬ್ ನಿರ್ವಹಣೆಯ ಪ್ರಸ್ತುತ ರಚನೆ | 4 |
| 4 | ರಾಜ್ಯ ನೋಡಲ್ ಸಂಸ್ಥೆ | 4 |
| 4.1 | ರಾಜ್ಯ ನೋಡಲ್ ಸಂಸ್ಥೆಯ ಪಾತ್ರಗಳು | 4 |
| 5 | ಜಿಲ್ಲಾ ನೋಡಲ್ ಅಧಿಕಾರಿಗಳ ಪಾತ್ರಗಳು | 5 |
| 6 | ಇಕೋಕ್ಲಬ್‌ನ ಉಸ್ತುವಾರಿ ಶಿಕ್ಷಕರು | 5 |
| 6.1 | ಇಕೋಕ್ಲಬ್‌ನ ಉಸ್ತುವಾರಿ ಶಿಕ್ಷಕರ ಪಾತ್ರಗಳು | 6 |
| 7 | ಕರ್ನಾಟಕ ರಾಜ್ಯದಲ್ಲಿ ಕಾರ್ಯವ್ಯಾಪ್ತಿ | 7 |
| 8 | ಇಕೋಕ್ಲಬ್‌ಗಳು ಆಯೋಜಿಸಬಹುದಾದ ಚಟುವಟಿಕೆಗಳ ವಿವಿಧ ಹಂತಗಳು | 7 |
| 8.1 | ಮೊದಲನೆ ಹಂತ | 7 |
| 8.2 | ಎರಡನೆ ಹಂತ | 7 |
| 8.3 | ಮೂರನೆ ಹಂತ | 8 |
| 9 | ಇಕೋಕ್ಲಬ್‌ಗಳು ಶಾಲಾ ಹಂತದಲ್ಲಿ ಆಯೋಜಿಸಬಹುದಾದ ಚಟುವಟಿಕೆಗಳು | 8 |
| 10 | ಇಕೋಕ್ಲಬ್‌ಗಳಿಗೆ ಬಿಡುಗಡೆಗೊಳ್ಳುವ ರೂ. 5000/– ಅನುದಾನ ಬಳಕೆಯ ವಿವರಗಳು | 10 |
| 11 | ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಗಾಗಿ ಆಯೋಜಿಸಬಹುದಾದ ಚಟುವಟಿಕೆಗಳು | 10 |
| 12 | ಜಿಲ್ಲೆಗಳಿಗೆ ಬಿಡುಗಡೆಗೊಳ್ಳುವ ರೂ.25000/–ಅನುದಾನದ ಬಳಕೆಯ ವಿವರಗಳು | 11 |
| 13 | ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಸಮಿತಿಗಳು | 12 |
| 13.1 | ರಾಷ್ಟ್ರೀಯ ಸಂಚಾಲನಾ ಸಮಿತಿ | 12 |
| 13.2 | ರಾಜ್ಯ ಸಂಚಾಲನ ಸಮಿತಿ | 12 |
| 13.3 | ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ | 14 |
| 14 | ಶಾಲೆಗಳ ಬಳಕೆ ಪ್ರಮಾಣ ಪತ್ರದ ಮಾದರಿ | 15 |
| 15 | Annual Report Format for NGC School | 16 |
| 15.1 | Annexure - I | 19 |
| 15.2 | Utilisation Certificate and Physical Report for Eco clubs | 20 |
| 16 | ಜಿಲ್ಲೆಗಳ ಬಳಕೆ ಪ್ರಮಾಣ ಪತ್ರದ ಮಾದರಿ | 21 |
| 16.1 | ಜಿಲ್ಲೆಗಳ ಕ್ರೋಢೀಕೃತ ಬಳಕೆ ಪ್ರಮಾಣ ಪತ್ರದ ಮಾದರಿ | 21 |
| 17 | Proforma for DIMC | 22 |
| 18 | Proforma for State Nodal Agency | 23 |
| 19 | ಬೂದು ಬಣ್ಣದಿಂದ ಹಸಿರಿನೆಡೆಗೆ ಪಯಣ | 24 |
| 19.1 | ಪ್ರಯೋಗ 1 | 26 |
| 19.2 | ಪ್ರಯೋಗ 2 | 29 |
| 19.3 | ಪ್ರಯೋಗ 3 | 32 |

# 1. ರಾಷ್ಟ್ರೀಯ ಹಸಿರು ಪಡೆ

## 1.1 ಪರಿಚಯ

2001 ರಲ್ಲಿ ಆರಂಭಗೊಂಡ ಶಾಲಾ ಕಾಲೇಜುಗಳ ಇಕೋ–ಕ್ಲಬ್ ಕಾರ್ಯಕ್ರಮವೆಂದು ಜನಪ್ರಿಯವಾಗಿರುವ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವು ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ರಾಷ್ಟ್ರೀಯ ಕಾರ್ಯಕ್ರಮವಾಗಿದೆ. ಪರಿಸರದ ಕುರಿತು ಜಾಗೃತಿ ಮೂಡಿಸಲು, ಪರಿಸರದ ಸಂರಕ್ಷಣೆ ಮತ್ತು ಸುಧಾರಣೆಗೆ ಕ್ರಿಯಾಧಾರಿತ ಕಾರ್ಯಕ್ರಮಗಳನ್ನು ಕೈಗೊಳ್ಳಲು ರಾಷ್ಟ್ರಾದ್ಯಂತ ಶಾಲಾ ಕಾಲೇಜುಗಳಲ್ಲಿ ಇಕೋ–ಕ್ಲಬ್‌ಗಳನ್ನು ಸ್ಥಾಪಿಸುವ ಮೂಲಕ "ರಾಷ್ಟ್ರೀಯ ಹಸಿರು ಸೈನ್ಯ"ವನ್ನು ಸ್ಥಾಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ದೇಶದಾದ್ಯಂತ ಇದೇ ಉದ್ದೇಶಕ್ಕಾಗಿ ಶಾಲಾ ಕಾಲೇಜುಗಳಲ್ಲಿ ಸ್ಥಾಪಿಸಲ್ಪಟ್ಟ ಇಕೋ–ಕ್ಲಬ್‌ಗಳ ಮೂಲಕ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸುಸ್ಥಿರ ಅಭಿವೃದ್ಧಿಯತ್ತ ಕೆಲಸ ಮಾಡುವ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳನ್ನು ಕಾರ್ಯಕರ್ತರನ್ನಾಗಿ ನಿರ್ಮಿಸುವ ಮತ್ತು ಹೆಸರೇ ಸೂಚಿಸುವಂತೆ ಇದು ಮಕ್ಕಳಲ್ಲಿ ಪರಿಸರ ವ್ಯವಸ್ಥೆ, ಪರಿಸರದ ಸಮಸ್ಯೆಗಳು ಮತ್ತು ಅದರ ಸಂರಕ್ಷಣೆಯ ಬಗ್ಗೆ ಸಂವೇದನೆಯನ್ನುಂಟುಮಾಡುವ ಕಾರ್ಯಕ್ರಮವಾಗಿದೆ. ಇದು ಪರಿಸರ ಜಾಗೃತಿಯನ್ನು ಸಾಮೂಹಿಕವಾಗಿ ತೆಗೆದುಕೊಳ್ಳುವುದರ ಮೂಲಕ ತಳಮಟ್ಟದಲ್ಲಿ ಅದರ ಮಹತ್ವವನ್ನು ಸೂಚಿಸುತ್ತದೆ.

## 1.2 ಕಾರ್ಯಕ್ರಮದ ಉಗಮ

ನಮಗೆಲ್ಲರಿಗೂ ನಾವು ವಾಸಿಸುತ್ತಿರುವ ಪರಿಸರದ ಮಹತ್ವ ತಿಳಿದಿದೆ. ಅಲ್ಲದೇ ಈ ಮಹತ್ವದ ಪರಿಸರವು ಕ್ರಮೇಣವಾಗಿ ನಮ್ಮಿಂದಲೇ ಅವನತಿಯತ್ತ ಸಾಗುತ್ತಿದ್ದು, ಅದರಿಂದಾಗಿ ಉದ್ಭವವಾಗುತ್ತಿರುವ ಪರಿಣಾಮಗಳ ಬಗ್ಗೆಯೂ ತಿಳಿದಿದೆ. ಪರಿಸರದ ಕುರಿತಾಗಿ ನಾವು ಅಳವಡಿಸಿಕೊಂಡಿರುವ ದೃಷ್ಟಿಕೋನಗಳಲ್ಲಿ ಮತ್ತು ವರ್ತನೆಗಳಲ್ಲಿಯೇ ಅನೇಕ ಪರಿಸರೀಯ ಸಮಸ್ಯೆಗಳಿಗೆ ಪರಿಹಾರವೂ ಇದೆ. ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಬಗ್ಗೆ ಜಾಗೃತಿ ಮೂಡಿಸುವ ಅಥವಾ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ನೈಸರ್ಗಿಕ ಸಂಪನ್ಮೂಲಗಳ ಪುನರ್ ಬಳಕೆ ಮಾಡುವಂತಹ ತಿಳುವಳಿಕೆಗಳೆಲ್ಲವೂ ನಮ್ಮ ದೈನಂದಿನ ವರ್ತನೆಯಲ್ಲಿಯೇ ಇವೆ. ಸಾಮಾನ್ಯವಾಗಿ ವಿಚಾರಿಸಿದಾಗ ಇದು ತುಂಬಾ ಸರಳವಾಗಿ ತೋರುತ್ತದೆ. ಈ ದಾರಿಯಲ್ಲಿ ಮುಂದುವರೆದಂತೆ ಜನರ ಮನೋಭಾವವನ್ನು ಈ ವಿಷಯವಾಗಿ ಒಂದೇ ದಿನದಲ್ಲಿ ಬದಲಾಯಿಸುವುದು ಅಸಾಧ್ಯ ಎಂಬ ಅರಿವು ಉಂಟಾಗುತ್ತದೆ. ಆದರೆ ಮಕ್ಕಳ ಮೂಲಕ ಸಮಾಜದ ವರ್ತನೆಯಲ್ಲಿ, ಮನೋಭಾವನೆಯಲ್ಲಿ ಬದಲಾವಣೆ ತರುವ ಪ್ರಯತ್ನವು ಒಂದು ಅತ್ಯುತ್ತಮ ಮಾರ್ಗವಾಗಿದೆ. ಮಕ್ಕಳಲ್ಲಿ ಯಾವುದೇ ವಿಕ್ಷಿಪ್ತ ಹಿತಾಸಕ್ತಿಗಳು ಇಲ್ಲದೇ ಇರುವುದರಿಂದ ಅವರು ಸರಳವಾಗಿ ಇತರ ವಿಷಯಗಳ ಪ್ರಭಾವಕ್ಕೊಳಗಾಗುತ್ತಾರೆ. ಚಿಕ್ಕ ವಯಸ್ಸಿನಲ್ಲಿ ಮಕ್ಕಳ ಮನಸ್ಸು ಪ್ರಭಾವಶಾಲಿ ಮತ್ತು ಸೃಜನಶೀಲವಾಗಿದ್ದು ಮಕ್ಕಳು ಸಕಾರಾತ್ಮಕವಾಗಿ ಪ್ರೇರೇಪಿತರಾಗುತ್ತಾರೆ. ಅಲ್ಲದೇ ಮಕ್ಕಳು ಅವರವರ ಕುಟುಂಬದಲ್ಲಿ ಬಹುಮುಖ್ಯ ಪ್ರಭಾವ ಬೀರುವವರಾಗಿರುತ್ತಾರೆ. ಈ ಎಲ್ಲಾ ಹಿನ್ನಲೆಯಿಂದ ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು ದೇಶದ ಎಲ್ಲಾ ಜಿಲ್ಲೆಗಳ ಶಾಲೆಗಳಲ್ಲಿ ಆರಂಭಿಸಲು ನಿರ್ಧರಿಸಿ 'ಶಾಲೆಯಿಂದ ಸಮಾಜಕ್ಕೆ' ಪರಸ್ಪರ ಕ್ರಿಯಾಚಟುವಟಿಕೆಗಳ ಮೂಲಕ ಸಮಾಜವನ್ನು ಸಂವೇದನಾಶೀಲಗೊಳಿಸಲು ಪ್ರೇರೇಪಿಸುತ್ತಿದೆ. ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದಡಿ ಪ್ರತಿ ಜಿಲ್ಲೆಯ ಸುಮಾರು 500 ಶಾಲಾ ಕಾಲೇಜುಗಳಲ್ಲಿ ಇಕೋ–ಕ್ಲಬ್‌ಗಳನ್ನು ಸ್ಥಾಪನೆಯಾಗಿದ್ದು ದೇಶಾದ್ಯಂತ 2 ಲಕ್ಷಕ್ಕೂ ಹೆಚ್ಚು ಇಕೋಕ್ಲಬ್(Eco club)ಗಳು ರಚನೆಯಾಗಿವೆ.

## 1.3 ಉದ್ದೇಶಗಳು:

- ಮಕ್ಕಳು ತಮ್ಮ ಸುತ್ತಲಿನ ಪರಿಸರ ಹಾಗು ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಅರ್ಥಮಾಡಿಕೊಳ್ಳುವಂತೆ ಮಾಡುವುದು.
- ಶಾಲಾ ಮಕ್ಕಳಿಗೆ ಪರಿಸರ ಶಿಕ್ಷಣದ ಕಲಿಕೆಯ ಅವಕಾಶವನ್ನು ಒದಗಿಸವುದು.
- ಶಾಲಾ ಮಕ್ಕಳನ್ನು ವಿಶಿಷ್ಟ ಮಾಧ್ಯಮವನ್ನಾಗಿ ಬಳಸಿಕೊಂಡು ಸಮಗ್ರ ಸಮಾಜದಲ್ಲಿ ಪರಿಸರ ಅರಿವು/ಜಾಗೃತಿಯನ್ನು ಮೂಡಿಸುವುದು.
- ಪರಿಸರ ಹಾಗು ಅಭಿವೃದ್ಧಿಗೆ ಸಂಬಂಧಿಸಿದಂತೆ ಮಕ್ಕಳು ಸ್ವತಃ ನಿರ್ಧಾರ ತೆಗೆದುಕೊಳ್ಳುವಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದು.
- ಮಕ್ಕಳನ್ನು ಅವರು ವಾಸಿಸುವ ಸಮಾಜ ಎದುರಿಸುತ್ತಿರುವ ಪರಿಸರ ಸಮಸ್ಯೆಗಳ ಹಾಗು ಪರಿಹಾರಗಳ ಕುರಿತು ಯೋಚಿಸುವಂತೆ ಮಾಡುವುದು.
- ಮಕ್ಕಳನ್ನು ಅವರ ಸುತ್ತಲಿನ ಪರಿಸರಕ್ಕೆ ಸಂಬಂಧಿಸಿದ ಕ್ರಿಯಾಧಾರಿತ ಚಟುವಟಿಕೆಗಳಲ್ಲಿ ತೊಡಗಿಸುವುದು.

## 1.4 ಸದಸ್ಯತ್ವ: ದೇಶದ ಪ್ರತಿ ಜಿಲ್ಲೆಯಲ್ಲಿ 500 ಶಾಲೆಗಳು. ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು.


ಮಕ್ಕಳಿಂದ ಸಸಿ ನೆಡುವ ಕಾರ್ಯಕ್ರಮ


"ಸ್ವಚ್ಛತಾ ಚಟುವಟಿಕೆಗಳು"



ಹಸಿರು ದೀಪಾವಳಿ ಆಚರಣೆ ಕುರಿತ ಜಾಗೃತಿ ಆಂದೋಲನ


ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

## 2. ಕಾರ್ಯಕ್ರಮ ಅನುಷ್ಠಾನದ ವಿಧಾನ

- ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಗುರುತಿಸಲಾದ ರಾಜ್ಯ ನೋಡಲ್ ಸಂಸ್ಥೆಯ ಮುಖಾಂತರ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ.
- ಸದಸ್ಯ ಶಾಲೆಗಳಲ್ಲಿ ಸ್ಥಾಪಿತವಾಗುವ ಇಕೋ-ಕ್ಲಬ್‌ಗಳ ಮೂಲಕ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು.
- ಪ್ರತಿಯೊಂದು ಇಕೋ-ಕ್ಲಬ್‌ನಲ್ಲಿ ಪರಿಸರ ಸಂಬಂಧಿತ ವಿಷಯಗಳ ಬಗ್ಗೆ ಆಸಕ್ತಿ ಇರುವ 30 ರಿಂದ 50 ಮಕ್ಕಳು ಹೊಂದಿರಬೇಕು.
- ಪ್ರತಿಯೊಂದು ಇಕೋ-ಕ್ಲಬ್‌ನ ಮೇಲ್ವಿಚಾರಣೆಗಾಗಿ, ಪರಿಸರ ಸಂಬಂಧಿಸಿದ ವಿಷಯಗಳಲ್ಲಿ ಆಸಕ್ತಿ ಹೊಂದಿರುವ ಒರ್ವ ಉಸ್ತುವಾರಿ ಶಿಕ್ಷಕರನ್ನು ಆಯ್ಕೆ ಮಾಡುವುದು.
- ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯು ರಚನೆಯಾಗಿದ್ದು ನಿಯತಕಾಲಿಕವಾಗಿ ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮದ ಅನುಷ್ಠಾನದ ಸಂಪೂರ್ಣ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ.
- ಪ್ರತಿ ಶೈಕ್ಷಣಿಕ ಜಿಲ್ಲೆಗಳಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಕಛೇರಿಯಲ್ಲಿ ಒರ್ವ ಅಧಿಕಾರಿಯು ರಾಷ್ಟ್ರೀಯ ಹಸಿರು ಪಡೆಯ ನೋಡಲ್ ಅಧಿಕಾರಿಯಾಗಿ ನೇಮಕಗೊಂಡಿರುತ್ತಾರೆ.
- ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆಗಾಗಿ ರಾಜ್ಯ ಮಟ್ಟದಲ್ಲಿ ರಾಜ್ಯ ಸಂಚಾಲನಾ ಸಮಿತಿಯು ರಚನೆಯಾಗಿದೆ.
- ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರೀಯ ಸಂಚಾಲನಾ ಸಮಿತಿಯು ರಚನೆಯಾಗಿದ್ದು, ಕಾರ್ಯಕ್ರಮಕ್ಕೆ ಸಮಗ್ರ ನಿರ್ದೇಶನ ಮತ್ತು ಎಲ್ಲಾ ಹಂತಗಳಲ್ಲಿ ಸಂಪರ್ಕಗಳನ್ನು ಒದಗಿಸುತ್ತದೆ.

### 2.1 ಶಾಲೆಗಳ ಆಯ್ಕೆಯ ಮಾನದಂಡ

- ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು
- ರಾಜ್ಯದ ಪ್ರತಿ ಜಿಲ್ಲೆಯ 500 ಶಾಲೆಗಳಲ್ಲಿ ಇಕೋಕ್ಲಬ್‌ಗಳನ್ನು ರಚಿಸಲು ಅವಕಾಶವಿರುತ್ತದೆ. ಪ್ರೌಢಶಾಲೆ, ಹಿರಿಯ ಮಾಧ್ಯಮಿಕ ಶಾಲೆಗೆ ಮೊದಲ ಆದ್ಯತೆ ನೀಡುವುದು. ಯಾವ ಜಿಲ್ಲೆಯಲ್ಲಿ 500 ಪ್ರೌಢಶಾಲೆ ಹಾಗೂ ಮಾಧ್ಯಮಿಕ ಶಾಲೆಗಳು ಕಡಿಮೆಯಿದ್ದರೆ, ಶಾಲೆಯ ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಹಿರಿಯ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡುವುದು.

### 2.2 ಆರ್ಥಿಕ ಅನುದಾನ

- ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ರಾಜ್ಯ ನೋಡಲ್ ಸಂಸ್ಥೆಗೆ ಅನುದಾನವನ್ನು ಬಿಡುಗಡೆ ಮಾಡುತ್ತದೆ. ರಾಜ್ಯ ನೋಡಲ್ ಸಂಸ್ಥೆಯು ಬಿಡುಗಡೆಯಾದ ಅನುದಾನವನ್ನು ಇಕೋ-ಕ್ಲಬ್‌ಗಳನ್ನು ಹೊಂದಿರುವ ಶಾಲೆಗಳ ಹಾಗು ಶೈಕ್ಷಣಿಕ ಜಿಲ್ಲೆಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾವಣೆ ಮಾಡುತ್ತದೆ.
- ಪರಿಸರ ಸಂರಕ್ಷಣೆಯನ್ನು ಬೆಂಬಲಿಸುವ ವಿವಿಧ ಚಟುವಟಿಕೆಗಳನ್ನು ಆಯೋಜಿಸಲು ಪ್ರತಿ ಶಾಲೆಯ ಇಕೋ-ಕ್ಲಬ್‌ಗೆ ವಾರ್ಷಿಕ ಆರ್ಥಿಕ ಅನುದಾನವನ್ನಾಗಿ ರೂ.5000/-ಗಳನ್ನು ನೀಡಲಾಗುತ್ತದೆ. ಇಕೋ-ಕ್ಲಬ್‌ಗಳ ಉಸ್ತುವಾರಿ ಶಿಕ್ಷಕರು ಮತ್ತು ಇಕೋಕ್ಲಬ್‌ಗಳ ಸದಸ್ಯ ವಿದ್ಯಾರ್ಥಿಗಳು ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಪ್ರಾಂಶುಪಾಲರೊಂದಿಗೆ ಸಮಾಲೋಚಿಸಿ ತಮ್ಮ ಚಟುವಟಿಕೆಗಳಿಗಾಗಿ ಅನುದಾನವನ್ನು ಬಳಕೆ ಮಾಡಬಹುದಾಗಿದೆ.
- ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಬಲ ಪಡಿಸಲು ಪ್ರತಿ ಜಿಲ್ಲೆಗೆ ವಾರ್ಷಿಕವಾಗಿ ರೂ 25,000/- ಅನುದಾನವನ್ನು ನೀಡಲಾಗುತ್ತಿದೆ.

## 3. ರಾಷ್ಟ್ರೀಯ ಹಸಿರು ಪಡೆ-ಇಕೋಕ್ಲಬ್ ನಿರ್ವಹಣೆಯ ಪ್ರಸ್ತುತ ರಚನೆ

ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ

↓

ರಾಷ್ಟ್ರೀಯ ಸಂಚಾಲನಾ ಸಮಿತಿ

↓

ರಾಜ್ಯ ಸಂಚಾಲನಾ ಸಮಿತಿ

↓

ರಾಜ್ಯ ನೋಡಲ್ ಸಂಸ್ಥೆ

↓

ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ

↓

ಶಾಲೆಗಳಲ್ಲಿ ಇಕೋಕ್ಲಬ್‌ಗಳು

## 4. ರಾಜ್ಯ ನೋಡಲ್ ಸಂಸ್ಥೆ

2001 ರಿಂದ 2008 ರವರೆಗೆ ಹಲವಾರು ಸಂಸ್ಥೆಗಳು ಕರ್ನಾಟಕ ರಾಜ್ಯದ ನೋಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಿದ್ದು, 2009 ನೇ ಸಾಲಿನಿಂದ, ಕರ್ನಾಟಕ ಸರ್ಕಾರದ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಧೀನದಲ್ಲಿರುವ ಸ್ವಾಯತ್ತ ಸಂಸ್ಥೆಯಾಗಿರುವ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ರಾಜ್ಯ ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

### 4.1 ರಾಜ್ಯ ನೋಡಲ್ ಸಂಸ್ಥೆಯ ಪಾತ್ರಗಳು

- ಕಾರ್ಯಕ್ರಮದ ಅನುಷ್ಠಾನದ ಸಮನ್ವಯ
- ಜಿಲ್ಲಾ ನೋಡಲ್ ಅಧಿಕಾರಿಗಳ ನಾಮ ನಿರ್ದೇಶನ
- ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯು ಸದಸ್ಯ ಶಾಲೆಗಳನ್ನು ಆಯ್ಕೆ ಮಾಡಲು ಸಹಯೋಗ
- ಸ್ಥಳೀಯವಾಗಿ ಪರಿಸರಕ್ಕೆ ಸಂಬಂಧಿಸಿದ ಸಂಪನ್ಮೂಲ ವಸ್ತುಗಳನ್ನು ಆಯ್ಕೆ ಮಾಡುವುದು
- ಇಕೋ-ಕ್ಲಬ್‌ನ ಉಸ್ತುವಾರಿ ಶಿಕ್ಷಕರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತರಬೇತಿ/ ಕಾರ್ಯಾಗಾರಗಳ ಆಯೋಜನೆ
- ಅನುದಾನ ಹಾಗೂ ಸಂಪನ್ಮೂಲ ವಸ್ತುಗಳನ್ನು ಇಕೋ-ಕ್ಲಬ್‌ಗಳನ್ನು ಹೊಂದಿರುವ ಶಾಲೆಗಳಿಗೆ ಹಾಗು ಶೈಕ್ಷಣಿಕ ಜಿಲ್ಲೆಗಳಿಗೆ ವಿತರಣೆ ಮಾಡುವುದು.
- ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯಿಂದ ವರದಿಯನ್ನು ಸ್ವೀಕರಿಸುವುದು ಮತ್ತು ಕ್ರೋಡೀಕೃತ ವರದಿಯನ್ನು ತಯಾರಿಸಿ ಕೇಂದ್ರ ನೋಡಲ್ ಅಧಿಕಾರಿಗೆ ಸಲ್ಲಿಸುವುದು
- ನಿಯಮಿತ ಶಾಲಾ ಭೇಟಿಗಳನ್ನು ಕೈಗೊಳ್ಳುವ ಮೂಲಕ ಕಾರ್ಯಕ್ರಮವನ್ನು ಸಕ್ರಿಯಗೊಳಿಸಲು ಮತ್ತು ಬಲಪಡಿಸಲು ನಿರಂತರ ಬೆಂಬಲ ಮತ್ತು ಸಹಕಾರ ನೀಡುವುದು.
- ರಾಜ್ಯ ಮಟ್ಟದ ಚಟುವಟಿಕೆಗಳನ್ನು ಆಯೋಜಿಸಿ ಸಮನ್ವಯ ನೀಡುವುದು.
- ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳು ಮತ್ತು ವಿದ್ಯಾರ್ಥಿಗಳು ಇಕೋ-ಕ್ಲಬ್‌ಗಳನ್ನು ಸೇರಲು ಪ್ರೋತ್ಸಾಹಿಸಲು ಕಾರ್ಯಕ್ರಮವನ್ನು ಪ್ರಚಾರ ಮಾಡುವುದು

## 5. ಜಿಲ್ಲಾ ನೋಡಲ್ ಅಧಿಕಾರಿಗಳ ಪಾತ್ರಗಳು

- ಜಿಲ್ಲಾ ನೋಡಲ್ ಅಧಿಕಾರಿಗಳು ರಾಷ್ಟ್ರೀಯ ಹಸಿರು ಪಡೆಯ ಕಾರ್ಯಕ್ರಮವನ್ನು ಜಿಲ್ಲಾ ಹಂತದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿರುತ್ತಾರೆ.
- ಜಿಲ್ಲಾ ಹಂತದಲ್ಲಿ ಆಯೋಜಿಸಲಾಗುವ ತರಬೇತಿಗಳು ಹಾಗು ಇತರ ಕಾರ್ಯಕ್ರಮಗಳಿಗೆ ಬೆಂಬಲ ಹಾಗು ಸಮನ್ವಯ ನೀಡುತ್ತಾರೆ.

## 6. ಇಕೋಕ್ಲಬ್‌ನ ಉಸ್ತುವಾರಿ ಶಿಕ್ಷಕರು

ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಯಶಸ್ಸು ಆಯಾ ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಪ್ರಾಂಶುಪಾಲರ ಮೇಲೆ ನಿಂತಿದೆಯಾದರೂ, ಇಕೋಕ್ಲಬ್‌ಗಳ ಉಸ್ತುವಾರಿ ಶಿಕ್ಷಕರು ಕಾರ್ಯಕ್ರಮದ ಅನುಷ್ಠಾನ ಮಾಡುವಲ್ಲಿ ಪ್ರಮುಖರಾಗಿರುತ್ತಾರೆ.



ಶಾಲೆಯ ಹೂತೋಟ



ಮಕ್ಕಳಿಂದ ಕಡಲ ತೀರದ ಸ್ವಚ್ಛತೆ



ಇಕೋ ಕ್ಲಬ್ ಉಸ್ತುವಾರಿ ಶಿಕ್ಷಕರಿಂದ ಸಭೆ



ಇಕೋಕ್ಲಬ್ ಮಕ್ಕಳಿಂದ ಬೀಜದ ಉಂಡೆ ತಯಾರಿಕೆ

## 6.1 ಇಕೋಕ್ಲಬ್‌ನ ಉಸ್ತುವಾರಿ ಶಿಕ್ಷಕರ ಪಾತ್ರಗಳು

- ವಿದ್ಯಾರ್ಥಿಗಳಿಗೆ ಸ್ಥಳೀಯ ಸಮಸ್ಯೆಗಳನ್ನು/ವಿಷಯಗಳನ್ನು ಗುರುತಿಸುವ ಅಗತ್ಯತೆಯನ್ನು ತಿಳಿಸುವುದರ ಜೊತೆಗೆ ಸಮಸ್ಯೆಗಳನ್ನು ಗುರುತಿಸಲು ಸಹಕರಿಸುವುದು.
- ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಇಕೋಕ್ಲಬ್ ಸೇರಲು ಪ್ರೋತ್ಸಾಹಿಸುವುದು
- ಪಠ್ಯೇತರ ಚಟುವಟಿಕೆಗಳನ್ನು ಯೋಜಿಸುವುದು ಮತ್ತು ಯೋಜಿಸಿದ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯೋಜನೆ/ವೇಳಾಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಕಾರ್ಯಕ್ರಮದ ಗುರಿ, ಉದ್ದೇಶಕ್ಕೆ ದಕ್ಕೆ ಆಗದಂತೆ ಚಟುವಟಿಕೆಗಳನ್ನು ಪರಿಣಾಮಾತ್ಮಕವಾಗಿ, ವ್ಯವಸ್ಥಿತವಾಗಿ ಮಾಡುವಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯಕ ಮಾರ್ಗದರ್ಶನ ಒದಗಿಸುವುದು.
- ಕಾರ್ಯಕ್ರಮದಲ್ಲಿ ಸೂಚಿಸಿದ ಚಟುವಟಿಕೆಗಳನ್ನು ಆಯಾ ಪ್ರದೇಶಕ್ಕೆ ಅನುಗುಣವಾಗಿ ಅನುಷ್ಠಾನಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವಲ್ಲಿ ಹೊಸ ಹೊಸ ಪರಿಕಲ್ಪನೆಗಳನ್ನು ಅಳವಡಿಸಿಕೊಳ್ಳುವುದು.
- ಪ್ರತಿ ವಾರ, ಕನಿಷ್ಠ ಒಂದು ಗಂಟೆ ಇಕೋಕ್ಲಬ್ ಸದಸ್ಯರನ್ನು ಒಟ್ಟುಗೂಡಿಸಿ ಚಟುವಟಿಕೆಗಳನ್ನು ಕೈಗೊಳ್ಳುವುದು. ಕಳೆದ ವಾರ ಕೈಗೊಂಡ ಚಟುವಟಿಕೆಗಳ ಪರಿಣಾಮದ ಕುರಿತು ಮತ್ತು ಮುಂದೆ ತೆಗೆದುಕೊಳ್ಳುವ ಚಟುವಟಿಕೆಗಳ ಬಗ್ಗೆ ಚರ್ಚಿಸುವುದು. ಇಕೋಕ್ಲಬ್ ಸಭೆಯಲ್ಲಿ ನಿರ್ಧಾರವಾದ ಚಟುವಟಿಕೆಯನ್ನು ಪೂರ್ಣಗೊಳಿಸುವಲ್ಲಿ ಶಾಲೆಯ ಎಲ್ಲ ಮಕ್ಕಳು ಭಾಗವಹಿಸುವಂತೆ ನೋಡಿಕೊಳ್ಳುವುದು.
- ಇಕೋಕ್ಲಬ್ ಸದಸ್ಯರಿಗೆ, ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಸೂಚಿಸುವಂತೆ ಪ್ರೇರೇಪಿಸಿ, ಅವರು ಸೂಚಿಸಿದ ಚಟುವಟಿಕೆಗಳ ಪಟ್ಟಿ ಮಾಡಿಕೊಳ್ಳುವುದು. ನಂತರ ಶಾಲೆಯ ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರ ಸಹಯೋಗದೊಂದಿಗೆ ವಿದ್ಯಾರ್ಥಿಗಳು ಸೂಚಿಸಿದ ಚಟುವಟಿಕೆಗಳ ಅನುಷ್ಠಾನದ ಸಿದ್ಧತೆಗಳನ್ನು ಮಾಡಿಕೊಳ್ಳುವುದು.
- ವಿದ್ಯಾರ್ಥಿಗಳು ಚಟುವಟಿಕೆಗಳನ್ನು ಕೈಗೊಳ್ಳುವಾಗ ತಮ್ಮ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಮತ್ತು ದಾಖಲೀಕರಿಸುವಂತೆ ಶಿಕ್ಷಕರು ಪ್ರೇರೇಪಿಸಬೇಕು.
- ಮಕ್ಕಳಿಂದ ಹೆಚ್ಚಾಗಿ ಕ್ರಿಯಾಧಾರಿತ ಚಟುವಟಿಕೆಗಳನ್ನು ಆಯ್ದುಕೊಂಡು, ಚಟುವಟಿಕೆಗಳನ್ನು ಮಕ್ಕಳಿಂದಲೇ ಮಾಡಿಸುವುದು.
- ಜಿಲ್ಲಾ ಮಟ್ಟದ ಸಾಮುದಾಯಿಕ ಕಾರ್ಯಕ್ರಮಗಳನು ಆಯೋಜಿಸಲು ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಗೆ ಸಮನ್ವಯ ನೀಡುವುದು.
- ಇಕೋಕ್ಲಬ್‌ಗೆ ತನ್ನದೇ ಆದ ಒಂದು ಪರಿಸರ ಸ್ನೇಹಿ ಬ್ಯಾನರ್ ಮಾಡಿಸುವುದು. ಇಕೋಕ್ಲಬ್‌ನ ಅಡಿಯಲ್ಲಿ ಮಾಡಿದ ಚಟುವಟಿಕೆಗಳ ಭಾವಚಿತ್ರಗಳು ಮತ್ತು ಪರಿಸರ ಸಂಬಂಧಿಸಿದ ಪತ್ರಿಕಾ ಪ್ರಕಟಣೆಗಳನ್ನು ಪ್ರದರ್ಶಿಸಲು ಶಾಲೆಯ ಸೂಚನಾ ಫಲಕ (Notice Board) ದ ಒಂದು ಭಾಗವನ್ನು ಮೀಸಲಿಡುವುದು.
- ಇಕೋಕ್ಲಬ್‌ನ ಅಡಿಯಲ್ಲಿ ನಡೆಯುವ ಸಭೆ, ಕಾರ್ಯಕ್ರಮ ಮತ್ತು ಚಟುವಟಿಕೆಗಳನ್ನು ದಾಖಲಿಸಲು ಒಂದು ನೋಂದಣಿ ಪುಸ್ತಕವನ್ನು ನಿರ್ವಹಿಸುವುದು. ಇದರಲ್ಲಿ ಆಯಾ ಸಾಲಿನ ಇಕೋಕ್ಲಬ್‌ನ ಸದಸ್ಯರ ವಿವರಗಳನ್ನು ದಾಖಲಿಸುವುದು.
- ಅನುದಾನದ ಬಳಕೆ ಪ್ರಮಾಣ ಪತ್ರವನ್ನು ವಾರ್ಷಿಕ ವರದಿಯೊಂದಿಗೆ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಗೆ ಸಲ್ಲಿಸುವುದು.
- **ವಿದ್ಯಾರ್ಥಿ ಪರಿಸರ ನಾಯಕ/ನಾಯಕಿ ಪರಿಕಲ್ಪನೆ:** ಇಕೋಕ್ಲಬ್‌ನ ಉಸ್ತುವಾರಿ ಶಿಕ್ಷಕರು ವಿದ್ಯಾರ್ಥಿ ಪರಿಸರ ನಾಯಕ/ನಾಯಕಿಯನ್ನು ನೇಮಿಸುವುದು. ಪರಿಸರ ನಾಯಕ/ನಾಯಕಿಯು ಇಕೋಕ್ಲಬ್‌ಗಳನ್ನು ಉಸ್ತುವಾರಿ ಶಿಕ್ಷಕರ ಮಾರ್ಗದರ್ಶನ ಹಾಗು ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ಇಕೋಕ್ಲಬ್‌ಗಳ ಚಟುವಟಿಕೆಗಳ ಮುಂದಾಳತ್ವವನ್ನು ವಹಿಸುವುದು.

## 7. ಕರ್ನಾಟಕ ರಾಜ್ಯದಲ್ಲಿ ಕಾರ್ಯವ್ಯಾಪ್ತಿ

2020-21 ರ ಸಾಲಿನಲ್ಲಿ ಕರ್ನಾಟಕ ರಾಜ್ಯದ ಎಲ್ಲಾ 34 ಶೈಕ್ಷಣಿಕ ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ಸುಮಾರು 500 ಶಾಲೆಗಳಂತೆ ಒಟ್ಟಾರೆ 16850 ಇಕೋಕ್ಲಬ್‌ಗಳನ್ನು ರಚಿಸಲಾಗಿದೆ. ಸರ್ಕಾರಿ ಪ್ರೌಢ ಶಾಲೆಗಳು, ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳು, ಅನುದಾನಿತ ಪ್ರೌಢ ಶಾಲೆಗಳು, ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳು ಹಾಗು ಅನುದಾನರಹಿತ ಶಾಲೆಗಳಲ್ಲಿ ಇಕೋಕ್ಲಬ್‌ಗಳು ರಚನೆಯಾಗಿವೆ.

## 8. ಇಕೋಕ್ಲಬ್‌ಗಳು ಆಯೋಜಿಸಬಹುದಾದ ಚಟುವಟಿಕೆಗಳ ವಿವಿಧ ಹಂತಗಳು

ಈ ಚಟುವಟಿಕೆಗಳು ಕೇವಲ ಸೂಚಕವಾಗಿದ್ದು, ಇಕೋಕ್ಲಬ್ ಶಾಲೆಗಳು ತಮ್ಮ ಹಂತದಲ್ಲಿ ನವೀನ/ವಿಭಿನ್ನ ಚಟುವಟಿಕೆಗಳನ್ನು ನಡೆಸಬಹುದು.

### 8.1 ಮೊದಲ ಹಂತ: ಅರಿವು ಆಧಾರಿತ ಚಟುವಟಿಕೆ

- ರ್‍ಯಾಲಿ/ಜಾಥಾ
- ತಜ್ಞರೊಂದಿಗೆ ಮಾತುಕತೆ
- ಶೈಕ್ಷಣಿಕ ಚಲನಚಿತ್ರ ಪ್ರದರ್ಶನಗಳು
- ಬೀದಿ ನಾಟಕಗಳು
- ಪ್ರಕೃತಿ ಶಿಬಿರ/ಪ್ರಕೃತಿ ನಡಿಗೆ
- ವಸ್ತು ಪ್ರದರ್ಶನ ವೀಕ್ಷಣೆ
- ಪರಿಸರ ಸಂರಕ್ಷಣಾ ಸಂದೇಶದೊಂದಿಗೆ ಛತ್ರಿ/ಸ್ಟಿಕ್ಕರ್
- ಗೋಡೆ ಚಿತ್ರಕಲೆ.
- ಪರಿಸರ ಪುಸ್ತಕ ಸಂಗ್ರಹ

### 8.2 ಎರಡನೇ ಹಂತ: ವೀಕ್ಷಣೆ ಮತ್ತು ದಾಖಲೀಕರಣ

ಈ ಹಂತದಲ್ಲಿ ಇಕೋಕ್ಲಬ್‌ನ ಸದಸ್ಯರು ಸಮೀಕ್ಷೆ-ಪ್ರವಾಸ, ಮಾಹಿತಿ ಸಂಗ್ರಹ, ದಾಖಲೆಗಳ ನಿರ್ವಹಣೆ, ವಿಶ್ಲೇಷಣೆ ಮತ್ತು ಪ್ರಸ್ತುತಿ/ಪ್ರಾತ್ಯಕ್ಷಿಕೆ ನೀಡಬಹುದು.

- ಪರಿಸರಕ್ಕೆ ಸಂಬಂಧಿಸಿದ ಸಮೀಕ್ಷೆ
- ರಾಷ್ಟ್ರೀಯ ಉದ್ಯಾನವನ/ಮೃಗಾಲಯ ವೀಕ್ಷಣೆ.
- ಸಸ್ಯೋದ್ಯಾನ ವೀಕ್ಷಣೆ
- ಸಾವಯವ ಕೃಷಿ ವೀಕ್ಷಣೆ
- ಕೆರೆ/ಸರೋವರ/ನದಿ/ಸಮುದ್ರ ವೀಕ್ಷಣೆ
- ಮಾರುಕಟ್ಟೆ/ಕಾರ್ಖಾನೆ/ಬಂದರು/ವಿಮಾನ ನಿಲ್ದಾಣ/ಬಸ್ ನಿಲ್ದಾಣ/ರೈಲು ನಿಲ್ದಾಣ ವೀಕ್ಷಣೆ
- ಪ್ರಾಣಿಗಳ ದತ್ತು
- ಒಣ ತ್ಯಾಜ್ಯ ಸಂಗ್ರಹ ಕೇಂದ್ರ / ರೊಚ್ಚು ನೀರು ಸಂಸ್ಕರಣಾ ಘಟಕ
- ದತ್ತಾಂಶ ಸಂಗ್ರಹ
- ಪರಿಸರಕ್ಕೆ ಸಂಬಂಧಿಸಿದ ದಾಖಲೆಗಳ ರಕ್ಷಣೆ.



'ಸ್ವಚ್ಛ ಕಡಲ ತೀರ' ಅಭಿಯಾನ



ಮಕ್ಕಳಿಂದ ರಸ್ತೆ ಜಾಥಾ

## 8.3 ಮೂರನೆ ಮತ್ತು ಅಂತಿಮ ಹಂತ: ಕ್ರಿಯಾ ಯೋಜನೆಗಳು

- ಗಿಡಗಳನ್ನು ನೆಡುವುದು
- ಎರೆಹುಳು ಗೊಬ್ಬರ/ಮಿಶ್ರ ಗೊಬ್ಬರ ತಯಾರಿಕೆ
- ನೀರು/ಇಂಧನ ಸಂರಕ್ಷಣೆ
- ನೈರ್ಮಲ್ಯದ ಬಗ್ಗೆ ಅರಿವು
- ನದಿ/ಸಮುದ್ರ ತೀರ ಸ್ವಚ್ಚಗೊಳಿಸುವುದು
- ಬೀಜ ಸಂಗ್ರಹ
- ಶಾಲಾ ಆವರಣದಲ್ಲಿ ಕಿರು ಅರಣ್ಯ ನಿರ್ಮಾಣ ಹಾಗು ನಿರ್ವಹಣೆ
- ಪ್ರಕೃತಿ ಛಾಯಾಗ್ರಹಣ
- ಬೀಜ ಉಂಡೆ ತಯಾರಿಕೆ
- ಶಬ್ದ/ಜಲ ಮಾಲಿನ್ಯ ಮೇಲ್ವಿಚಾರಣೆ

## 9. ಇಕೋಕ್ಲಬ್‌ಗಳು ಶಾಲಾ ಹಂತದಲ್ಲಿ ಆಯೋಜಿಸಬಹುದಾದ ಚಟುವಟಿಕೆಗಳು.

- ಶಾಲೆಯಲ್ಲಿ ಪರಿಸರ ದಿನಗಳನ್ನು ಆಚರಿಸಿ, ಶಾಲೆಯ ಆವರಣದಲ್ಲಿ ಸಸಿಗಳನ್ನು ನೆಟ್ಟು, ಮಕ್ಕಳಿಗೆ ದತ್ತು ನೀಡಿ, ಅವುಗಳನ್ನು ಪೋಷಿಸುವುದರ ಮೂಲಕ ಶಾಲೆಯಲ್ಲಿ ಹಸಿರು ವಾತಾವರಣವನ್ನು ಸೃಷ್ಟಿಸುವುದು.
- ಮಕ್ಕಳಿಂದ ಪರಿಸರ ಸಂರಕ್ಷಣೆ ಕುರಿತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು. ಈ ಕಾರ್ಯಕ್ರಮದಲ್ಲಿ ಶಾಲಾ ಮೇಲುಸ್ತುವಾರಿ ಸಮಿತಿಯ ಸದಸ್ಯರು, ಪೋಷಕರು, ಹಳೆಯ ವಿದ್ಯಾರ್ಥಿಗಳ ಸಹಕಾರದೊಂದಿಗೆ ಪರಿಸರ ಸಂರಕ್ಷಣೆ ಕುರಿತು ಸಮುದಾಯದ ಜನತೆಗೆ ಅರಿವು ಮೂಡಿಸುವಂತೆ ಪ್ರೇರೇಪಿಸುವುದು.
- ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯ ಹಾಗು ಮಣ್ಣಿನ ಮಾಲಿನ್ಯದಿಂದುಂಟಾಗುವ ಸಮಸ್ಯೆಗಳು ಹಾಗು ಮಾಲಿನ್ಯವನ್ನು ತಡೆಗಟ್ಟುವ ವಿಧಾನಗಳ ಬಗ್ಗೆ ಮಾಹಿತಿಯನ್ನು ಪರಿಸರ ಪ್ರೇಮಿ ಹಾಗು ಪರಿಸರ ತಜ್ಞರಿಂದ ಉಪನ್ಯಾಸ ನೀಡುವುದು ಹಾಗು ದೃಕ್ ಶ್ರವಣ ಮಾಧ್ಯಮಗಳ ಮೂಲಕ ಅರಿವು ಮೂಡಿಸುವುದು.
- ಪರಿಸರ ಮಾಲಿನ್ಯದಿಂದ ಹವಾಮಾನದಲ್ಲಿ ಉಂಟಾಗುವ ಏರುಪೇರುಗಳಿಂದ ಸಂಭವಿಸುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಶಿಕ್ಷಕರು, ಮಕ್ಕಳಿಗೆ ಪರಿಸರ ಪ್ರೇಮಿಗಳ ಹಾಗು ಅವರ ಸಾಧನೆಗಳ ಬಗ್ಗೆ ಮಾಹಿತಿ ಒದಗಿಸುವುದು
- ಪ್ಲಾಸ್ಟಿಕ್, ಧ್ವನಿವರ್ಧಕಗಳು, ಸ್ಫೋಟಕ ವಸ್ತುಗಳ ಬಳಕೆಯಿಂದ ಸಮುದಾಯಕ್ಕೆ ಉಂಟಾಗುವ ತೊಂದರೆಗಳ ಬಗ್ಗೆ ಮಾಹಿತಿ ನೀಡುವುದು ಮತ್ತು ಪ್ಲಾಸ್ಟಿಕ್ ಬಳಕೆ ಮಾಡುವುದಿಲ್ಲವೆಂಬ ಪ್ರಮಾಣವನ್ನು ಮಕ್ಕಳಿಂದ ಮಾಡಿಸುವುದರ ಮೂಲಕ ಪ್ಲಾಸ್ಟಿಕ್ ನಿಷೇಧಕ್ಕೆ ಕ್ರಮ ಕೈಗೊಳ್ಳುವುದು.
- ನಿಸರ್ಗದಲ್ಲಿ ಮುಗಿದು ಹೋಗುವ ಸಂಪನ್ಮೂಲಗಳ ಸಂರಕ್ಷಣೆಯ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿ, ಅವುಗಳನ್ನು ಭವಿಷ್ಯತ್ತಿನ ಪೀಳಿಗೆಗೆ ಕಾಪಾಡುವಂತೆ ತಿಳಿಸುವುದು. ಅಗತ್ಯವಿದ್ದಾಗ ಮಾತ್ರ ಶಕ್ತಿ ಸಂಪನ್ಮೂಲಗಳನ್ನು ಬಳಸುವಂತೆ ತಿಳಿಸುವುದು.
- ಹಸಿ ಕಸ, ಒಣ ಕಸ ಹಾಗು ಘನ ತ್ಯಾಜ್ಯಗಳನ್ನು ಪ್ರತ್ಯೇಕಿಸುವುದು. ಶಾಲಾ ಆವರಣದಲ್ಲಿರುವ ಎಲೆಗಳನ್ನು ಸಂಗ್ರಹಿಸಿ ಎರೆಹುಳು ಗೊಬ್ಬರ ತಯಾರಿಸಿ ಸಸ್ಯಗಳಿಗೆ ಉಪಯೋಗಿಸುವುದರ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು.
- ಪ್ರತೀ ತರಗತಿಗೆ ಹಸಿರು ಮತ್ತು ನೀಲಿ ಬಣ್ಣದ ಸಣ್ಣ ಸಣ್ಣ ಕಸದ ಬುಟ್ಟಿಗಳನ್ನು ಬಳಸುವುದು. ಹಸಿ ಕಸ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಕಸದ ಬುಟ್ಟಿಗೆ ಹಾಕಿದ ನಂತರ ಕಸದ ಬುಟ್ಟಿಯನ್ನು ಶುಚಿಗೊಳಿಸಿ ತರಗತಿ ಕೋಣೆಯಲ್ಲಿ ಬಳಸುವುದು.
- ಸೂಚನಾ ಫಲಕದಲ್ಲಿ ಪರಿಸರಕ್ಕೆ ಸಂಬಂಧಿಸಿದ ಘೋಷಣೆಗಳು, ಕವನಗಳು, ಚಿತ್ರಗಳು, ಪತ್ರಿಕಾ ಪ್ರಕಟಣೆಗಳನ್ನು ಪ್ರದರ್ಶಿಸುವುದು. ಪರಿಸರ ಸಂರಕ್ಷಣೆ ಹಾಗು ಸ್ವಚ್ಛತೆಗೆ ಸಂಬಂಧಿಸಿದಂತೆ ದಿನಕ್ಕೊಂದು ಘೋಷಣೆಗಳನ್ನು ಪ್ರಾರ್ಥನಾ

ವೇಳೆಯಲ್ಲಿ ಮಕ್ಕಳಿಂದ ಹೇಳಿಸಿ ಶಿಕ್ಷಕರು ಅದರ ಅರ್ಥ ಹಾಗು ಮಹತ್ವವನ್ನು ತಿಳಿಸುವುದು.

- ಮಕ್ಕಳು ತಾವು ವಾಸಿಸುವ ಪರಿಸರದ ಸಮಸ್ಯೆಗಳ ಕುರಿತು ಯೋಚಿಸುವಂತೆ ಹಾಗು ಸಮಸ್ಯೆಗಳನ್ನು ಬಗೆಹರಿಸಲು ಶಿಕ್ಷಕರು ಪ್ರೇರೇಪಿಸುವುದು.
- ಸ್ಥಳೀಯ/ ಹತ್ತಿರದ ಪರಿಸರ ಸ್ನೇಹಿ ಶಾಲೆ, ಉದ್ಯಾನವನ/ವನ್ಯಜೀವಿಧಾಮಗಳಿಗೆ ಭೇಟಿ ನೀಡಿ ಅಲ್ಲಿನ ಮರಗಳ, ಪ್ರಾಣಿಗಳ ಹೆಸರು, ಉಪಯೋಗಗಳನ್ನು ತಿಳಿಸುವುದು.
- ಶಾಲಾಮಕ್ಕಳನ್ನು ಹೊರಸಂಚಾರ ಕೈಗೊಂಡು ಗಿಡಮರಗಳ, ತೊರೆ–ಕೆರೆ, ಗುಡ್ಡಗಳ ಸಮೀಪಕ್ಕೆ ಕರೆದೊಯ್ದು ಪರಿಚಯಿಸಿ ಮರಗಳ ಬೀಜಗಳನ್ನು ಸಂಗ್ರಹಿಸುವುದು, ಬೀಜಗಳನ್ನು ನೆಡುವುದು, ಅವುಗಳ ಹೆಸರುಗಳನ್ನು, ಉಪಯೋಗಗಳನ್ನು ಅಲ್ಲಿ ವಾಸಿಸುವ ಪಕ್ಷಿಗಳ ಬಗ್ಗೆ ಅಧ್ಯಯನ ಮಾಡಿಸುವುದು ಹಾಗು ಶಾಲಾಹಂತದಲ್ಲಿ ಪ್ರದರ್ಶನ ಮಾಡುವುದು.
- ಅಡುಗೆ ಮನೆ ತ್ಯಾಜ್ಯ ಹಾಗು ಬಳಸಿದ ನೀರನ್ನು ಶಾಲಾ ಕೈತೋಟಕ್ಕೆ ಬಳಸುವುದು.
- ಮಕ್ಕಳು ಆಹಾರವನ್ನು ವ್ಯರ್ಥ ಮಾಡದಂತೆ ಮನವೊಲಿಸುವುದು.
- ಓಜೋನ್ ಪದರದ ನಾಶದಿಂದಾಗುವ ದುಷ್ಪರಿಣಾಮಗಳ ಕುರಿತು ಮಾಹಿತಿ ಹಾಗು ಸಂರಕ್ಷಣೆಯ ಬಗ್ಗೆ ಮಾಹಿತಿ ನೀಡುವುದು.
- ವನ, ವನ್ಯಜೀವಿಗಳ ಮಹತ್ವ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದು.
- ಮಕ್ಕಳಿಗೆ ಮಣ್ಣಿನ ಗಣೇಶನ ಮೂರ್ತಿಯನ್ನು ಬಳಸುವಂತೆ ಸೂಚಿಸುವುದು. ದೀಪಾವಳಿ ಹಬ್ಬದಂದು ಮಣ್ಣಿನ ದೀಪ ಹಚ್ಚುವುದು, ಮಕ್ಕಳಿಗೆ ಪಟಾಕಿ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡುವುದು.
- ಮಗುವಿಗೊಂದು ಮರ ಶಾಲೆಗೊಂದು ವನ ಯೋಜನೆಯ ಅನುಷ್ಠಾನ.
- "ಸ್ವಚ್ಛ ಭಾರತ ಸ್ವಚ್ಛ ವಿದ್ಯಾಲಯ"ದಡಿ ಶಾಲಾ ಪರಿಸರ ಹಾಗು ಶಾಲಾ ಕೊಠಡಿಗಳನ್ನು ಶುಚಿಯಾಗಿಟ್ಟುಕೊಳ್ಳುವುದು.
- ಶಾಲೆಯಲ್ಲಿರುವ ಹಳೆಯ/ಅನುಪಯುಕ್ತ ವಸ್ತುಗಳನ್ನು ನಿಯಮಾನುಸಾರ ವಿಲೇವಾರಿ ಮಾಡುವುದು.
- "ಶಾಲೆಗಳಲ್ಲಿ ಸ್ವಚ್ಛತಾ ಆಂದೋಲನ" ಕಾರ್ಯಕ್ರಮವನ್ನು ಹಮ್ಮಿಕೊಂಡು ಮಕ್ಕಳಲ್ಲಿ ಸ್ವಚ್ಛತಾ ಮನೋಭಾವನೆಯ ಮೌಲ್ಯಗಳನ್ನು ಬೆಳೆಸಿ, ಶಾಲಾ ಹಾಗು ಸಮುದಾಯದ ಪರಿಸರ ಸ್ವಚ್ಛವಾಗಿಟ್ಟುಕೊಳ್ಳುವಂತೆ ಅಭ್ಯಾಸ ಬೆಳೆಸುವುದು.
- ಘೋಷಣೆಗಳೊಂದಿಗೆ ಮಕ್ಕಳಿಂದ ಜಾಥಾ ಕೈಗೊಂಡು ಸಮುದಾಯದ ಜನತೆಗೆ ಪರಿಸರ ಸ್ವಚ್ಛವಾಗಿಟ್ಟುಕೊಳ್ಳುವಂತೆ ಮಾಹಿತಿ ನೀಡುವುದು.
- ಮಳೆಗಾಲದಲ್ಲಿ ನೀರಿನ ಸಂರಕ್ಷಣೆ ಮಾಡುವುದು ಹಾಗು ನೀರನ್ನು ಮಿತವಾಗಿ ಬಳಸುವುದು.
- ಶುದ್ಧ ಕುಡಿಯುವ ನೀರನ್ನು ಮಕ್ಕಳಿಗೆ ಒದಗಿಸುವ ದೃಷ್ಟಿಯಿಂದ ನೀರಿನ ಸಂಪನ್ನು ಶುದ್ಧಗೊಳಿಸಿ ಸಂರಕ್ಷಿಸುವುದು.
- ಜಲ ಮಾಲಿನ್ಯಕ್ಕೆ ಕಾರಣಗಳು ಹಾಗೂ ಜಲ ಸಂರಕ್ಷಣೆ ಬಗ್ಗೆ ಮಾಹಿತಿ ನೀಡುವುದು.
- ಮಳೆ ಕೊಯ್ಲಿನ ಉಪಯೋಗಗಳ ಬಗ್ಗೆ ಮಕ್ಕಳಿಗೆ ತಿಳಿಸುವುದು.
- ಶಾಲಾ ಮಕ್ಕಳಿಗೆ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಪ್ರಬಂಧ ಸ್ಪರ್ಧೆ, ಭಾಷಣ, ಚಿತ್ರಕಲಾ ಸ್ಪರ್ಧೆ, ರಸಪ್ರಶ್ನೆ ಕಾರ್ಯಕ್ರಮ, ಜಾಥಾ, ಬೀದಿ ನಾಟಕ, ಘೋಷ ವಾಕ್ಯಗಳನ್ನು ಬರೆಸುವ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಪರಿಸರ ಜಾಗೃತಿ ಮೂಡಿಸುವುದು

## 10. ಇಕೋಕ್ಲಬ್‌ಗಳಿಗೆ ಬಿಡುಗಡೆಗೊಳ್ಳುವ ರೂ. 5000/– ಅನುದಾನ ಬಳಕೆಯ ವಿವರಗಳು

| ವಿವರಗಳು | ಅನುದಾನ (ರೂ) |
|---|---|
| ಶಾಲಾ ಆವರಣದಲ್ಲಿ ಸಸಿಗಳನ್ನು ನೆಡುವುದು ಹಾಗು ಸಂರಕ್ಷಿಸುವುದು | 1000/– |
| ಸ್ವಚ್ಛತೆಯ ಪರಿಕರಗಳ ಖರೀದಿಗಾಗಿ (ಪ್ರತಿ ತರಗತಿಗೆ ಕಸದ ಬುಟ್ಟಿಗಳು) | 1000/– |
| ಪರಿಸರ ಸಂರಕ್ಷಣೆ ಕುರಿತು ಸಾಮಾಜಿಕ ಅರಿವು ಮೂಡಿಸಲು ಬ್ಯಾನರ್, ಭಿತ್ತಿ ಪತ್ರಗಳ ರಚನೆ | 500/– |
| ಪರಿಸರ ಸಂರಕ್ಷಣೆ ಕುರಿತು ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಧೆಗಳ ಆಯೋಜನೆ ಮತ್ತು ಬಹುಮಾನ ವಿತರಣೆ (ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ, ಘೋಷಣೆಗಳ ರಚನೆ, ಜಾಥಾ, ಬೀದಿನಾಟಕ ಹಮ್ಮಿಕೊಳ್ಳುವಿಕೆ ಕನಿಷ್ಠ –5 ಸ್ಪರ್ಧೆಗಳು) | 1000/– |
| ಪರಿಸರ ತಜ್ಞರಿಂದ ಹಾಗು ದೃಕ್ ಶ್ರವಣ ಮಾಧ್ಯಮದ ಮೂಲಕ ವಿದ್ಯಾರ್ಥಿಗಳಿಗೆ ಕಾಡಿನ ಸಂಪತ್ತು ರಕ್ಷಣೆ, ಕಸ ಬೇರ್ಪಡಿಸುವಿಕೆ, ಪರಿಸರ ಮಾಲಿನ್ಯದಿಂದಾಗುವ ಖಾಯಿಲೆಗಳು ಹಾಗು ಇತರೆ ಅನಾಹುತಗಳು ಹಾಗು ಪರಿಸರ ಸಂರಕ್ಷಣೆ ಕುರಿತು ಮಕ್ಕಳಿಗೆ ಮಾಹಿತಿ ನೀಡುವುದು. | 1000/– |
| ದಾಖಲೀಕರಣ | 500/– |
| **ಒಟ್ಟು** | **5000/–** |

*(ಮೂಲ: ಸಮಗ್ರ ಶಿಕ್ಷಣ ಕರ್ನಾಟಕದ ಸುತ್ತೋಲೆ, ಸಂಖ್ಯೆ: ಸಶಿಅ/ಆಚ/ಎಂಪ್ರಿ/2019–20 ದಿನಾಂಕ 28.08.2019)*

## 11. ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಗಾಗಿ ಆಯೋಜಿಸಬಹುದಾದ ಚಟುವಟಿಕೆಗಳು

- ಶಾಲಾ/ಕಾಲೇಜಿನ ಒಳಗಿನ ಹಾಗು ಹೊರಗಿನ ಆವರಣದಲ್ಲಿ ಲಭ್ಯವಿರುವ ಜಾಗಗಳಲ್ಲಿ ಸಣ್ಣಕಾಡನ್ನು (Miniforest) ಬೆಳೆಸುವುದು. ಪೌಷ್ಠಿಕಾಂಶ ಮೌಲ್ಯಗಳನ್ನಾಧರಿಸಿ ಸ್ಥಳೀಯ ಗಿಡಗಳನ್ನು ನೆಡುವಲ್ಲಿ ಶ್ರಮಿಸುವುದು.
- ಮನೆಯ ಹಿತ್ತಲಿನಲ್ಲಿ, ಮನೆಯ ಮೇಲ್ಭಾಗದಲ್ಲಿ, ಬಾಲ್ಕನಿಗಳಲ್ಲಿ ಹಾಗು ಇನ್ನಿತರೆ ಜಾಗಗಳಲ್ಲಿ ಪೌಷ್ಠಿಕಾಂಶ ಗಿಡಗಳನ್ನೊಳಗೊಂಡ ಉದ್ಯಾನಗಳನ್ನು ನಿರ್ಮಿಸುವುದು. ಪೌಷ್ಠಿಕಾಂಶಯುಕ್ತ ಸಮೃದ್ಧ ಸಸ್ಯಗಳನ್ನು ನೆಡುವಲ್ಲಿ ಉತ್ತೇಜಿಸಬಹುದು, ಇದು ವರ್ಷಪೂರ್ತಿ ಕುಟುಂಬದ ಆಹಾರದ ಅವಶ್ಯಕತೆಗಳನ್ನು ಪೂರೈಸುತ್ತದೆ.
- ಅಡುಗೆ ಮನೆಗಾಗಿ ಗೊಬ್ಬರ ಹಾಕುವಂತಹ ಕಸದ ಬುಟ್ಟಿಗಳನ್ನು/ಮಡಕೆಗಳನ್ನು ಇಡಲು ಪ್ರೇರೇಪಿಸುವುದು. ಅಡುಗೆ ಮನೆಯಲ್ಲೇ ಅಥವಾ ಪೌಷ್ಠಿಕಾಂಶಯುಕ್ತ ಉದ್ಯಾನದಲ್ಲಿ ಜೈವಿಕವಿಘಟನೆಯ ತ್ಯಾಜ್ಯಗಳನ್ನು ಬಳಕೆ ಮಾಡುವುದು.
- ಬಟಾಣಿ, ಕುಂಬಳಕಾಯಿ, ಸೋರೆಕಾಯಿ ಮುಂತಾದ ವಿವಿಧ ತರಕಾರಿಗಳ ಬೀಜದುಂಡೆಗಳನ್ನು ಮಾಡುವುದು
- ಇಕೋ–ಹೋಮ್ ಆಗಲು ಪ್ರತಿ ಮನೆಯವರು ಅನುಸರಿಸಬೇಕಾದ ಅಭ್ಯಾಸಗಳ ಪಟ್ಟಿಯನ್ನು ಮಾಡುವುದು. ಉದಾಹರಣೆಗೆ: – ನಲ್ಲಿಗಳಿಗೆ ವಾಟರ್ ಏರೇಟರ್, ಮನೆಯಲ್ಲಿ ಆಮ್ಲಜನಕವನ್ನು ಬಿಡುಗಡೆ ಮಾಡುವ ಸಸ್ಯಗಳು, ಪಕ್ಷಿ ಮನೆ, ಎಲ್‌ಇಡಿ ದೀಪ, ಸೌರ ಫಲಕಗಳ ಬಳಕೆ ಈ ಎಲ್ಲಾ ಚಟುವಟಿಕೆಗಳನ್ನು ಅಳವಡಿಸುವುದು ಮತ್ತು ತಮ್ಮ ಮನೆಯನ್ನು ಇಕೋ–ಹೋಮ್ ಎಂದು ಹೆಮ್ಮೆಯಿಂದ ಘೋಷಿಸಿವುದು.
- ಪರಿಸರ ಸ್ನೇಹಿ ಅಭ್ಯಾಸಗಳಾದ ಪ್ಲಾಸ್ಟಿಕ್ ಬಾಟಲ್‌ಗಳ ಮರುಬಳಕೆಯಿಂದ ಪೆನ್ ಸ್ಟಾಂಡ್ ಮಾಡುವುದು, ಹೂ ಕುಂಡಗಳನ್ನು ಮಾಡುವುದು, ಇಕೋ–ಇಟ್ಟಿಗೆ (ತ್ಯಾಜ್ಯ ವಸ್ತುಗಳನ್ನು ತುಂಬಿಸಿ ಮರದ ರಕ್ಷಾಕವಚವಾಗಿ ಬಳಸುವುದು) ಅಲಂಕಾರಿಕ ವಸ್ತುಗಳನ್ನು ಪ್ರದರ್ಶಿಸುವುದು ಮತ್ತು ಪ್ರೇರೇಪಿಸುವುದು.

*(ಮೂಲ: ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಪತ್ರ: ಸಂಖ್ಯೆ: F.No: 12-1/2020-EE, ದಿನಾಂಕ: 12.02.2021)*

## 12. ಜಿಲ್ಲೆಗಳಿಗೆ ಬಿಡುಗಡೆಗೊಳ್ಳುವ ರೂ.25000/–ಅನುದಾನದ ಬಳಕೆಯ ವಿವರಗಳು

- ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಬಲ ಪಡಿಸಲು ಆಯೋಜಿಸಲಾಗುವ ಚಟುವಟಿಕೆಗಳು / ಕಾರ್ಯಗಾರಗಳು / ಕಾರ್ಯಕ್ರಮಗಳು
- ರಾಜ್ಯ ಮಟ್ಟದ ಕಾರ್ಯಗಾರಕ್ಕೆ ಆಗಮಿಸುವ ಜಿಲ್ಲಾ ನೋಡಲ್ ಅಧಿಕಾರಿ/ಸಂಪನ್ಮೂಲ ವ್ಯಕ್ತಿಗೆ ಪ್ರಯಾಣ ಭತ್ಯೆ
- ಜಿಲ್ಲಾ ಹಂತದಲ್ಲಿ ಪರಿಸರಕೂಟ ಉಸ್ತುವಾರಿ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳು
- ಜಿಲ್ಲಾ ಕಛೇರಿಯಲ್ಲಿ ಇಕೋಕ್ಲಬ್‌ನ ಬ್ಯಾನರ್, ಘೋಷ ವಾಕ್ಯಗಳ ರಚನೆ
- ಸ್ವಚ್ಛತೆಯ ಪರಿಕರಗಳ ಖರೀದಿ.
- ಉತ್ತಮ ಪರಿಸರ ಶಾಲೆಗಳನ್ನು ಗುರುತಿಸಿ ಪ್ರೋತ್ಸಾಹ ನೀಡುವುದು ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.


ಏಕಬಳಕೆ ಪ್ಲಾಸ್ಟಿಕ್ ನಿಷೇಧದ ಕುರಿತು ರಸ್ತೆ ಜಾಥಾ


ಕೆರೆ ಸ್ವಚ್ಛತಾ ಚಟುವಟಿಕೆ


ಕಡಲತೀರದಿಂದ ತ್ಯಾಜ್ಯ ಸಂಗ್ರಹಣೆ


ತಜ್ಞರೊಂದಿಗೆ ಪರಿಸರ ವೀಕ್ಷಣೆ

## 13. ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಸಮಿತಿಗಳು

### 13.1 ರಾಷ್ಟ್ರೀಯ ಸಂಚಾಲನಾ ಸಮಿತಿ

ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಅಪರ ಕಾರ್ಯದರ್ಶಿ/ವಿಶೇಷ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚನೆಗೊಂಡಿರುವ ರಾಷ್ಟ್ರೀಯ ಸಂಚಲನಾ ಸಮಿತಿಯು ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ನೀಡುವುದು. ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದಡಿಯಲ್ಲಿ ನಡೆಸಲಾಗುವ ಚಟುವಟಿಕೆಗಳನ್ನು ವಿಮರ್ಶಿಸಲು ರಾಜ್ಯ ನೋಡಲ್ ಸಂಸ್ಥೆಗಳ ರಾಷ್ಟ್ರ ಮಟ್ಟದ ಸಭೆ/ಕಾರ್ಯಾಗಾರಗಳನ್ನು ಆಯೋಜಿಸುವುದು.

### ರಾಷ್ಟ್ರೀಯ ಸಂಚಾಲನಾ ಸಮಿತಿಯ ಸಂಯೋಜನೆ

| | | |
|---|---|---|
| 1 | ಅಪರ ಕಾರ್ಯದರ್ಶಿ/ವಿಶೇಷ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ | ಅಧ್ಯಕ್ಷರು |
| 2 | ಜಂಟಿ ಕಾರ್ಯದರ್ಶಿ(ಐಎಫ್‌ಡಿ) / ಉಪಕಾರ್ಯದರ್ಶಿ(ಐಎಫ್‌ಡಿ) ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ | ಸದಸ್ಯರು |
| 3 | ಜಂಟಿಕಾರ್ಯದರ್ಶಿ / ಸಲಹೆಗಾರರು (ಪರಿಸರ ಶಿಕ್ಷಣ), ಅರಣ್ಯ ಪರಿಸರ & ಹವಾಮಾನ ಬದಲಾವಣೆ ಮಂತ್ರಾಲಯ | ಸದಸ್ಯರು |
| 4 | ಜಂಟಿ ಕಾರ್ಯದರ್ಶಿ, ಮಾನವ ಸಂಪನ್ಮೂಲ ಅಭಿವೃದ್ದಿ ಮಂತ್ರಾಲಯ, ದೆಹಲಿ | ಸದಸ್ಯರು |
| 5 | ಅಧ್ಯಕ್ಷರು, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ ಅಥವಾ ನಾಮನಿರ್ದೇಶಿತರು | ಸದಸ್ಯರು |
| 6 | ಅಧ್ಯಕ್ಷರು, ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ ಅಥವಾ ನಾಮ ನಿರ್ದೇಶಿತರು | ಸದಸ್ಯರು |
| 7 | ನಾಲ್ಕು ರಾಜ್ಯದ ನೋಡಲ್ ಸಂಸ್ಥೆಯ ಪ್ರತಿನಿಧಿಗಳು ಎರಡು/ ಮೂರು ವರ್ಷಗಳಿಗೊಮ್ಮೆ ನಾಲ್ಕು ಪ್ರದೇಶವನ್ನು ಪ್ರತಿನಿಧಿಸುತ್ತಾರೆ. | ಸದಸ್ಯರು |
| 8 | ನಿರ್ದೇಶಕರು/ಜಂಟಿ ನಿರ್ದೇಶಕರು (ಪರಿಸರ ಶಿಕ್ಷಣ), ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ | ಸದಸ್ಯ ಕಾರ್ಯದರ್ಶಿ |

### 13.2 ರಾಜ್ಯ ಸಂಚಾಲನ ಸಮಿತಿ

ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆ ಹಾಗೂ ಕಾರ್ಯಕ್ರಮಕ್ಕೆ ಸಂಬಂಧಿಸಿದ ಎಲ್ಲಾ ಮಟ್ಟದಲ್ಲಿಯ ಸಂಪರ್ಕಗಳನ್ನು ರಾಜ್ಯ ಮಟ್ಟದ ಸಂಚಾಲನಾ ಸಮಿತಿಯು ಒದಗಿಸುತ್ತದೆ. ಕಾರ್ಯಕ್ರಮದ ಸಮಗ್ರ ನಿರ್ದೇಶನಗಳನ್ನು, ತೀರ್ಮಾನಗಳನ್ನು ಇದೇ ಸಮಿತಿಯಲ್ಲಿ ತೆಗೆದುಕೊಳ್ಳಲಾಗುತ್ತದೆ ಹಾಗೂ ಈ ಸಮಿತಿಯು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಾರ್ಗದರ್ಶನ ನೀಡುತ್ತದೆ.

## ರಾಜ್ಯ ಸಂಚಾಲನಾ ಸಮಿತಿಯ ಪಾತ್ರಗಳು

- ರಾಜ್ಯದಲ್ಲಿ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆ
- ಇಕೋಕ್ಲಬ್‌ಗಳಿಗೆ ಸಕ್ರಿಯವಾಗಿ ಸಹಾಯ ಮಾಡಲು ವಿವಿಧ ಸರ್ಕಾರಿ ಇಲಾಖೆಗಳನ್ನು ಪ್ರೋತ್ಸಾಹಿಸುವುದು
- ನಿಯತಕಾಲಿಕವಾಗಿ ಯೋಜನೆಯ ಅನುಷ್ಠಾನವನ್ನು ಪರಿಶೀಲಿಸುವುದು ಮತ್ತು ಜಿಲ್ಲಾ ಮಟ್ಟದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಸೂಚಿಸುವುದು.
- ಅತ್ಯುತ್ತಮ ಜಿಲ್ಲೆ, ಅತ್ಯುತ್ತಮ ಇಕೋಕ್ಲಬ್ ಅನ್ನು ಆಯ್ಕೆ ಮಾಡಲು ಅವರ ಚಟುವಟಿಕೆಗಳಿಗೆ ಪ್ರಚಾರವನ್ನು ನೀಡುವುದು ಏಕೆಂದರೆ ಇತರೆ ಜಿಲ್ಲೆ ಮತ್ತು ಇಕೋಕ್ಲಬ್‌ಗಳು ಅವುಗಳನ್ನು ಅಳವಡಿಸಿಕೊಳ್ಳಬಹುದು.

## ರಾಜ್ಯ ಸಂಚಾಲನ ಸಮಿತಿಯ ಸಂಯೋಜನೆ

| | | |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ | ಅಧ್ಯಕ್ಷರು |
| 2 | ಸರ್ಕಾರದ ಕಾರ್ಯದರ್ಶಿಗಳು, (ಜೀವಿಶಾಸ್ತ್ರ ಮತ್ತು ಪರಿಸರ) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ. | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ) | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ | ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. | ಸದಸ್ಯರು |
| 7 | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ. | ಸದಸ್ಯರು |
| 8 | ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಸರ್ವ ಶಿಕ್ಷಣ ಅಭಿಯಾನ. | ಸದಸ್ಯರು |
| 9 | ಪರಿಸರ ಶಿಕ್ಷಣ ಕೇಂದ್ರ –ಸರ್ಕಾರೇತರ ಸಂಸ್ಥೆ | ಸದಸ್ಯರು |
| 10 | "ಪರಿಸರ" ಪರಿಸರ ಸಂರಕ್ಷಣಾ ಸಂಸ್ಥೆ | ಸದಸ್ಯರು |
| 11 | ರಾಜ್ಯ ನೋಡಲ್ ಅಧಿಕಾರಿ–ಮಹಾ ನಿರ್ದೇಶಕರು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ | ಸದಸ್ಯ ಕಾರ್ಯದರ್ಶಿಗಳು |

## 13.3 ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ

ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯು ಜಿಲ್ಲಾ ಮಟ್ಟದಲ್ಲಿ, ಪರಿಸರ ಉಸ್ತುವಾರಿ ವಹಿಸಿಕೊಂಡಿರುವ ಶಿಕ್ಷಕರಿಗೆ ತರಬೇತಿ ಆಯೋಜನೆ ಮತ್ತು ಕಾಲಕಾಲಕ್ಕೆ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಅನುಷ್ಠಾನದ ಸಂಪೂರ್ಣ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ.

### ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯ ಪಾತ್ರಗಳು

- ರಾಜ್ಯ ನೋಡಲ್ ಸಂಸ್ಥೆಯೊಂದಿಗೆ ಸಮಾಲೋಚಿಸಿ ಸದಸ್ಯ ಶಾಲೆಯನ್ನು ಗುರುತಿಸುವುದು.
- ಶಾಲೆಯ ಮುಖ್ಯಸ್ಥರನ್ನು ಯೋಜನೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು.
- ತಜ್ಞ ತರಬೇತುದಾರರನ್ನು ಆಯ್ಕೆ ಮಾಡುವುದು ಮತ್ತು ಅವರನ್ನು ರಾಜ್ಯ ನೋಡಲ್ ಸಂಸ್ಥೆಯು ಆಯೋಜಿಸಲಾದ ತರಬೇತಿಗೆ ಕಳುಹಿಸುವುದು.
- ಮುಖ್ಯ ಶಿಕ್ಷಕರ ಸಹಯೋಗದೊಂದಿಗೆ ಶಾಲೆಗಳ ಉಸ್ತುವಾರಿ ಶಿಕ್ಷಕರನ್ನು ಗುರುತಿಸುವುದು ಮತ್ತು ಅವರಿಗೆ ತರಬೇತಿಯನ್ನು ಆಯೋಜಿಸುವುದು.
- ಉಸ್ತುವಾರಿ ಶಿಕ್ಷಕರ ತರಬೇತಿಯ ಸಮಯದಲ್ಲಿ ಸಂಪನ್ಮೂಲ ವಸ್ತುಗಳನ್ನು ವಿತರಿಸುವುದು.
- ಜಿಲ್ಲಾ ಮಟ್ಟದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಆಯೋಜಿಸುವುದು.
- ಜಿಲ್ಲೆಗಳಲ್ಲಿರುವ ಇಕೋಕ್ಲಬ್‌ಗಳ ಚಟುವಟಿಕೆಗಳಿಗೆ ಸಹಕರಿಸುವುದು, ಸಮನ್ವಯಗೊಳಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು.
- ಶಾಲೆಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಕೈಗೊಳ್ಳಲಾದ ಚಟುವಟಿಕೆಗಳ ವಿವರಗಳನ್ನು ನಿಗದಿತ ಸ್ವರೂಪದಲ್ಲಿ ತಯಾರಿಸಿ ರಾಜ್ಯ ನೋಡಲ್ ಸಂಸ್ಥೆಗೆ ತಿಳಿಸುವುದು.
- 10–15 ಶಾಲೆಗಳಿಗೆ ಒಬ್ಬ ಮೇಲ್ವಿಚಾರಕರನ್ನು ಆಯ್ಕೆ ಮಾಡುವುದು ಮತ್ತು ವರದಿಗಳನ್ನು ಪರಿಶೀಲಿಸುವುದು.
- ಮೇಲ್ವಿಚಾರಣಾ ವರದಿಯನ್ನು ವೇಳಾಪಟ್ಟಿಯ ಪ್ರಕಾರ ರಾಜ್ಯ ನೋಡಲ್ ಸಂಸ್ಥೆಗೆ ನಿಗಧಿತ ಸ್ವರೂಪದಲ್ಲಿ/ನಮೂನೆಯಲ್ಲಿ ಕಳುಹಿಸುವುದು.


ಮಕ್ಕಳಿಂದ ಪರಿಸರ ಕುರಿತ ಕಿರುನಾಟಕ


ಪರಿಸರ ಜಾಗೃತಿಗಾಗಿ ಬೀದಿ ನಾಟಕ

## ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯ ಸಂಯೋಜನೆ

| | | |
|---|---|---|
| 1 | ಜಿಲ್ಲಾಧಿಕಾರಿ | ಅಧ್ಯಕ್ಷರು |
| 2 | ಉಪ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಇಲಾಖೆ) | ಸದಸ್ಯರು |
| 3 | ಉಪ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | ಸದಸ್ಯರು |
| 4 | ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ | ಸದಸ್ಯರು |
| 6 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ | ಸದಸ್ಯರು |
| 7 | ಜಿಲ್ಲೆಯಲ್ಲಿ ಪರಿಸರಕ್ಕೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುತ್ತಿರುವ ಎರಡು ಪ್ರಮುಖ ಸರ್ಕಾರೇತರ ಸಂಸ್ಥೆಗಳು | ಸದಸ್ಯರು |
| 8 | ಉಪ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ | ಸದಸ್ಯರು |
| 9 | ಉಪ ಯೋಜನಾ ಸಮನ್ವಯಾಧಿಕಾರಿಗಳು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ | ಸದಸ್ಯರು |
| 10 | ಐದು ಆಯ್ದ ಇಕೋಕ್ಲಬ್ ಶಾಲೆಗಳ ಮುಖ್ಯಸ್ಥರು | ಸದಸ್ಯರು |
| 11 | ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯ ಕಾರ್ಯದರ್ಶಿ |

## 14. ಶಾಲೆಗಳ ಬಳಕೆ ಪ್ರಮಾಣ ಪತ್ರದ ಮಾದರಿ

ಶಾಲೆಯ ಹೆಸರು: ____________________

ಶಾಲೆಯ ವಿಳಾಸ: ____________________

ಊರು:__________ತಾಲೂಕು:__________ಜಿಲ್ಲೆ:__________

ಶೈಕ್ಷಣಿಕ ವರ್ಷ:__________ ದಿನಾಂಕ:__________ನೇ ಸಾಲಿನಲ್ಲಿ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು ಮೂಲಕ, ಇಕೋ ಕ್ಲಬ್ ಚಟುವಟಿಕೆಗಳಿಗಾಗಿ ಹಂಚಿಕೆ ಮಾಡಿರುವ ಅನುದಾನ ರೂ.5,000/– (ಐದು ಸಾವಿರ ರೂಪಾಯಿಗಳು ಮಾತ್ರ)ದಲ್ಲಿ ರೂ.__________ (____________________ರೂಪಾಯಿಗಳನ್ನು ಮಾತ್ರ) ನಮ್ಮ ಶಾಲೆಯ ಇಕೋ ಕ್ಲಬ್ ಚಟುವಟಿಕೆಗಳಿಗಾಗಿ ದಿನಾಂಕ: 31:03:__________ ರೊಳಗೆ ವಿನಿಯೋಗಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಶಾಲೆ / ಇಕೋ ಕ್ಲಬ್ ಮೊಹರು :
ಇಕೋ ಕ್ಲಬ್ :
ಉಸ್ತುವಾರಿ ಶಿಕ್ಷಕರ ಹೆಸರು :
ಮೊಬೈಲ್ ಸಂಖ್ಯೆ :

ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರ ಸಹಿ :
ಮುಖ್ಯೋಪಾಧ್ಯಾಯರು/
ಪ್ರಾಂಶುಪಾಲರ ಹೆಸರು :
ಮೊಬೈಲ್ ಸಂಖ್ಯೆ :

# 15. Annual Report Format for NGC School

(Source: "Journey from "Grey to Green" – A Self Assessment Manual for National Green Corps Eco Clubs, 2014. By Ministry of Environment, Forests and Climate Change, Government of India)

This annual report is to be submitted to the District Implementation and Monitoring Committee (DIMC) along with the Statement of Expenditure given in Annexure – I.

## 1. Details of the NGC school:

| | | |
|---|---|---|
| Name of the School | | |
| Name of the Head Master/Principal | | |
| Strength/Enrolment of the school (Boys, Girls) | Boys | Girls |
| Medium of instruction | | |
| Complete postal address (with pin code number): | | |
| E-mail Address (School) | | |
| Phone number (School) | | |

## 2. About NGC Programme

- Name of the teacher in-charge/coordinator:
- Contact details of the teacher in-charge/coordinator:
- E-mail ID of the teacher in-charge/coordinator:
- Participation of coordinator in orientation/training programme (yes/no, if yes date):
- Name of Eco-club and date of Eco-club formation:
- Number of students in Eco-club: Boys: Girls: Total:

## 3. Details on Eco-club activities

- Number of Eco-club meetings held and frequency (Daily/Weekly/Fortnightly/Monthly/Others):

4A: (This is only an indicative list; the NGC schools/Eco-clubs may as well develop innovative activities at their own level)

| Activity | | |
|---|---|---|
| Level 1 – Awareness activity | Date and Duration | No. of participating students |
| Rally | | |
| Film shows | | |
| Expert Talks | | |
| Street play | | |
| Nature camp/Nature walk | | |
| Exhibition | | |
| Others including Important events | | |
| Level 2 – Observation and Documentation | | |
| Survey Outings | | |
| Data Collection | | |
| Record Keeping | | |
| Analysis | | |
| Presentation | | |
| Others | | |
| Level 3 – Action Projects | | |
| Plantation | | |
| Vermicomposting/composting | | |
| Sanitation facility | | |
| Water conservation | | |
| Energy conservation | | |
| Others | | |

4B: Reporting on Outcomes (Please refer "Journey from "Grey to Green" – A Self Assessment Manual for National Green Corps Eco Clubs, 2014. By Ministry of Environment, Forests and Climate Change, Government of India to fill this section)

| Levels | Number of Students/Families in Neighborhood/Society showing | | | Remarks |
|---|---|---|---|---|
| | Small Hand Print | Medium Hand Print | Large Hand Print | |
| Individual (Students) | | | | |
| | Grey Colour | Brown Colour | Green Colour | |
| Schools | | | | |
| Neighborhood | | | | |

Signature of the In-Charge teacher:

Signature of the Head Master/Principal with seal:

Date:

City/Town/Village:





"ಸ್ವಚ್ಛ ಭಾರತ" ಚಟುವಟಿಕೆಗಳು

# 15.1 Annexure – I

NGC Grant received Amount:Date:

Grant from Other Agency:

| | Amount | Date |
|---|---|---|
| State Govt. | | |
| Corporates | | |
| NGOs | | |

Resource / Education materials received:

| Yes/No | Type | Nature of adequacy of Resource material |
|---|---|---|
| | | |
| | | |
| | | |
| | | |

| Sl. No. | Activities/tasks | Amount Spent |
|---|---|---|
| 1 | Administrative costs | |
| 2 | Activity costs | |
| 3 | Information Education Communication (IEC) material costs | |
| 4 | Other costs | |
| 5 | Total | |

Signature of the In-Charge teacher:

Signature of the Head Master/Principal with seal:

Date:

City/Town/Village:

## 15.2 Utilisation Certificate and Physical Report for Eco clubs (FY ------)

| Sl. No. | Particulars | |
|---|---|---|
| 1 | State | |
| 2 | District | |
| 3 | Name of the school/Eco- club | |
| 4 | Address of School | |
| 5 | Contact details Mobile/Tel NO | |
| 6 | Total No. of volunteers who attended the programme | • School Children ☐ |
| 7 | Area visited (Panchayat / Forest) | |
| 8 | Types of activities and awareness campaigns undertaken | • No. of saplings planted<br>• No. of sites of waste Segregation in schools<br>• No. of Rain water harvesting structures in schools<br>• Weight of Paper re-cycled<br>• Slogans competitions/debated held<br><br>• Campaign on No cracker in Diwali/No chemical colour in Holi/No Noise beyond permissible limit during festivals<br><br>• Watersheds built<br>• Celebration of World Environment Day |
| 9 | Amount received through State Nodal agency | Rs……......(in words) |
| 10 | Mode of receipt of grant (Rs 5000/-) | Bank transfer<br>DD/Cheque |
| 11 | Feedback of eco club teachers ( coordinator) | II Satisfactory ☐<br>III Scope for improvement ☐ |
| 12 | Remarks if any | |

Certified that the amount of Rs 5000/- released under NGC programme to this school has been fully utilized for the purpose for which it has been sanctioned.

Name and Signature of Eco-club
Coordinator of School with stamp

# 16. ಜಿಲ್ಲೆಗಳ ಬಳಕೆ ಪ್ರಮಾಣ ಪತ್ರದ ಮಾದರಿ

**ಸಮಗ್ರ ಶಿಕ್ಷಣ ಕರ್ನಾಟಕ**

**ರಾಷ್ಟ್ರೀಯ ಹಸಿರು ಪಡೆ**

**ಬಳಕೆ ಪ್ರಮಾಣ ಪತ್ರ**

____________ನೇ ಆಯವ್ಯಯ ವರ್ಷ ದಿನಾಂಕ: ____________

ಜಿಲ್ಲಾ ಹಂತದಲ್ಲಿ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲ್ವಿಚಾರಣೆಯ ಬಲವರ್ಧಿಸಲು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು ಬಿಡುಗಡೆಗೊಳಿಸಿದ ರೂ. 25,000/–ವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆಗೊಳಿಸಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಿರುತ್ತೇವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಉಪನಿರ್ದೇಶಕರು ಮತ್ತು ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸಮಗ್ರ ಶಿಕ್ಷಣ ಕರ್ನಾಟಕ

# 16.1 ಜಿಲ್ಲೆಗಳ ಕ್ರೋಡೀಕೃತ ಬಳಕೆ ಪ್ರಮಾಣ ಪತ್ರದ ಮಾದರಿ

**ಸಮಗ್ರ ಶಿಕ್ಷಣ ಕರ್ನಾಟಕ**

**ರಾಷ್ಟ್ರೀಯ ಹಸಿರು ಪಡೆ**

**ಕ್ರೋಡೀಕೃತ ಬಳಕೆ ಪ್ರಮಾಣ ಪತ್ರ**

ದಿನಾಂಕ:____________

______________ನೇ ಆಯವ್ಯಯ ವರ್ಷದಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಹಸಿರು ಪಡೆ ಯೋಜನೆಯಡಿ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಬ್ಯಾಂಕ್ ಖಾತೆಯಿಂದ__________________ ಜಿಲ್ಲೆಯ ಇಕೋಕ್ಲಬ್ ಶಾಲೆಗಳ ಬ್ಯಾಂಕ್ ಖಾತೆಗೆ ತಲಾ ರೂ 5,000/– ದಂತೆ ವರ್ಗಾವಣೆ ಮಾಡಲಾಗಿದ್ದು, ಎಲ್ಲಾ ಪದವಿ ಪೂರ್ವ ಕಾಲೇಜುಗಳ/ಪ್ರೌಢಶಾಲೆಗಳ/ಹಿರಿಯ ಪ್ರಾಥಮಿಕ/ಕಿರಿಯ ಪ್ರಾಥಮಿಕ ಶಾಲೆಗಳ ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರು ಅವರ ಕಾಲೇಜು/ಶಾಲೆಯ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುವ ಅನುದಾನವನ್ನು ಶಾಲೆಯ ಇಕೋ ಕ್ಲಬ್ ಚಟುವಟಿಕೆಗಳಿಗೆ ಪೂರ್ತಿಯಾಗಿ ರೂ____________________________________________ (ಪದಗಳಲ್ಲಿ) ವೆಚ್ಚ ಮಾಡಿದ್ದು ಇದಕ್ಕೆ ಸಂಬಂಧಿಸಿದಂತೆ ಅವರು ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ ಎಂದು ಈ ಮೂಲಕ ಧೃಢೀಕರಿಸಲಾಗಿದೆ.

ಉಪನಿರ್ದೇಶಕರು ಮತ್ತು ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸಮಗ್ರ ಶಿಕ್ಷಣ ಕರ್ನಾಟಕ

## 17. Proforma for District Implementation & Monitoring Committee (DIMC) (Monitoring Proforma- District Level)

(Activity Report -To be submitted to the State Nodal Agency)

1. Name of the District:
2. Number of Participating Schools:
3. Number of Participating Students.

### I. Activities by Individual Schools

| Activity | No of Schools Which Conducted | No of Students Participated |
|---|---|---|
| 1. Seminar/Talk/Debate | | |
| 2. Camp/ Field Visit | | |
| 3. Plantation/Cleanliness Drive | | |
| 4. Awareness by Rallies etc. | | |
| 5. Others (Specify) | | |

### II. Activities Conducted by District Committee

| Activity | No of Schools Which participated | No of Students who participated |
|---|---|---|
| | | |

### II. Monitoring Status

1. Has the Monitoring Committee met during this quarter: Yes/No
2. Have the Committee members inspected the working of Eco-clubs in Schools: Yes/No
3. If Yes, No. of Schools Visited:
4. Remarks:

Date:

Signature of DDPI/DYPC/ NGC
District Nodal officer with Seal

## 18. Proforma for State Nodal Agency-(Monitoring Proforma-State Level)

(Activity Report -To be submitted to Central Nodal Officer)

1. Name of the State:
2. Number of Districts covered under the Scheme:
3. Number of participating Schools:
4. Number of participating Students:

### I. Activities by Individual Schools

| Activity | No of Schools Which Conducted | No of Students who participated |
|---|---|---|
| 1. Seminar/Talk/Debate | | |
| 2. Camp/ Field Visit | | |
| 3. Plantation/Cleanliness Drive | | |
| 4. Awareness by Rallies etc. | | |
| 5. Others (Specify) | | |

### II. Activities Conducted by District Committee

| Activity | No of Schools Which participated | No of Students who participated |
|---|---|---|
| | | |
| | | |

### II. Monitoring Status

1. Has the Monitoring Committee met during this quarter: Yes/No
2. Have the Committee members inspected the working of Eco-clubs in Districts/Schools: Yes/No
3. If Yes, Number of Districts/Schools Visited:
4. Remarks:

Date:


Signature of State Nodal Officer
with Seal

## 19. ಬೂದು ಬಣ್ಣದಿಂದ ಹಸಿರಿನೆಡೆಗೆ ಪಯಣ

## (Journey from Grey to Green)

### ರಾಷ್ಟ್ರೀಯ ಹಸಿರು ಪಡೆ ಯೋಜನೆಯಡಿಯ, ಇಕೋ-ಕ್ಲಬ್‌ಗಳ ಸ್ವಯಂ ಮೌಲ್ಯಮಾಪನ ಕೈಪಿಡಿ

### (A self-assessment manual for NGC Eco Clubs)



(ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಇಂಗ್ಲಿಷ್ ಕೈಪಿಡಿಯ ಕನ್ನಡ ಅನುವಾದ)

## ಕೈಪಿಡಿಯ ಕುರಿತು (About The Manual)

ಸಕಾರಾತ್ಮಕ ಬದಲಾವಣೆಗಾಗಿ ಉತ್ತೇಜಿತ ಕ್ರಮಗಳನ್ನು ಬೆಳೆಸಿಕೊಳ್ಳುವ ಪ್ರಮುಖ ಗುರಿಯನ್ನಿಟ್ಟುಕೊಂಡು, ಶಾಲೆಗಳಲ್ಲಿಯ ಇಕೋ–ಕ್ಲಬ್ ಕಾರ್ಯಕ್ರಮವೆಂದು ಜನಪ್ರಿಯವಾಗಿರುವ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು, ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು 2001 ರಲ್ಲಿ ಆರಂಭಿಸಿತು. ಪ್ರಸ್ತುತ ಕೈಪಿಡಿಯು ಇಕೋ–ಕ್ಲಬ್ ಅಡಿಯಲ್ಲಿ ಕೈಗೊಂಡ ಚಟುವಟಿಕೆಗಳ ಪರಿಣಾಮಗಳನ್ನು ನಿರ್ಣಯಿಸಲು ಅಥವಾ ಮೌಲ್ಯಮಾಪನ ಮಾಡಿಕೊಳ್ಳಲು ಇಕೋ–ಕ್ಲಬ್ ಮಕ್ಕಳಿಗೆ ನೆರವಾಗಲು, ಉಸ್ತುವಾರಿ ಶಿಕ್ಷಕರಿಗೆ ಮಾರ್ಗದರ್ಶಿಯಾಗಿ ಸಹಾಯಕವಾಗಿದೆ.

ಈ ಮೌಲ್ಯಮಾಪನವು ಇಕೋ–ಕ್ಲಬ್ ವಿದ್ಯಾರ್ಥಿಗಳಿಂದ ಕೈಗೊಳ್ಳಲಾಗುತ್ತದೆ. ಇಲ್ಲಿ ಇಕೋ–ಕ್ಲಬ್ ನೋಡಿಕೊಳ್ಳುವ ಉಸ್ತುವಾರಿ ಶಿಕ್ಷಕರ ಮುಖ್ಯ ಪಾತ್ರವೆಂದರೆ, ಅವರು ಸಂಯೋಜಕರಾಗಿ, ಇಕೋ–ಕ್ಲಬ್ ವಿದ್ಯಾರ್ಥಿಗಳಿಗೆ, ಅವರು ಈ 'ಗ್ರೇ ಟು ಗ್ರೀನ್' ಪಯಣದಲ್ಲಿ ಎಷ್ಟು ದೂರ ಕ್ರಮಿಸಿದ್ದಾರೆ (ಇಕೋ–ಕ್ಲಬ್ ಚಟುವಟಿಕೆಗಳನ್ನು ಅಳೆಯಲು ಬೂದು(Grey), ಕಂದು(Brown) ಮತ್ತು ಹಸಿರು(Green) ಎಂಬ ಬಣ್ಣಗಳನ್ನು ಸಾಂಕೇತಿಕವಾಗಿ ಇರಿಸಿಕೊಳ್ಳಲಾಗಿದೆ) ಎಂಬುದನ್ನು ತಿಳಿಸುವಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಈ ಮೌಲ್ಯಮಾಪನವು ಎಲ್ಲ ಇಕೋ–ಕ್ಲಬ್ ವಿದ್ಯಾರ್ಥಿಗಳ, ಇಕೋ–ಕ್ಲಬ್‌ಗಳ ಅಥವಾ ಶಾಲೆಗಳ ಚಟುವಟಿಕೆಗಳ ಉದ್ದಗಲಕ್ಕೂ ತುಂಬಾ ಆಳವಾದ ಹೋಲಿಕೆ ಅಥವಾ ಮೌಲ್ಯಮಾಪನವಾಗಿರದೇ, 'ಗ್ರೇ ಟು ಗ್ರೀನ್' ಪಯಣದ ಪ್ರಗತಿಯನ್ನು ಅಳೆಯುವ ಒಂದು ಸಾಧನವಾಗಿದೆ.

ಇದೇ ಸಮಯದಲ್ಲಿ ಉಸ್ತುವಾರಿ ಶಿಕ್ಷಕರು, ಪರಿಣಾಮಕಾರಿಯಾಗಿ ಇಕೋ–ಕ್ಲಬ್ ವಿದ್ಯಾರ್ಥಿಗಳ ಚಟುವಟಿಕೆಗಳಲ್ಲಿ ಸಂಯೋಜಕರಾಗಿ/ಸಂಪರ್ಕ ಮತ್ತು ಸೌಕರ್ಯ ವ್ಯಕ್ತಿಯಾಗುವ ಕಲೆಯನ್ನು ಅಭ್ಯಸಿಸುವ ಅಗತ್ಯವಿದೆ. ಶಿಕ್ಷಕರಿಗೆ ಪರಿಣಾಮಕಾರಿಯಾಗಿ ಇಕೋ–ಕ್ಲಬ್ ಶಿಕ್ಷಕರಾಗಿ ಬೆಳೆಯಲು ಮತ್ತು ಮುಖ್ಯವಾಗಿ ಸಾಮಾಜಿಕವಾಗಿ ಮತ್ತು ಸುಸ್ಥಿರವಾದ ಪರಿಸರದ ಅಭಿವೃದ್ಧಿಯ ಪಥದಲ್ಲಿ ಮಕ್ಕಳು ನಾಯಕತ್ವದ ಗುಣವನ್ನು ಬೆಳೆಸಿಕೊಳ್ಳುವಲ್ಲಿ ಹೇಗೆ ಸಹಕರಿಸಬೇಕು ಎಂಬುವುದಕ್ಕೆ ಶಿಕ್ಷಕರಿಗಿರಬೇಕಾದ ಕೆಲವು ವೈಶಿಷ್ಟ್ಯಗಳನ್ನು, ಲಕ್ಷಣಗಳನ್ನು ಕೂಡಾ ಈ ಕೈಪಿಡಿಯು ತಿಳಿಸುತ್ತದೆ.

### ಇಕೋ–ಕ್ಲಬ್ ಚಟುವಟಿಕೆಗಳ ಪರಿಣಾಮವನ್ನು 3 ರೀತಿಯಲ್ಲಿ ನೋಡುವುದು

1) ವಿದ್ಯಾರ್ಥಿಗಳ ವೈಯಕ್ತಿಕ ಮಟ್ಟದಲ್ಲಿ
2) ಶಾಲೆಗಳ ಮಟ್ಟದಲ್ಲಿ
3) ನೆರೆಹೊರೆಯ ಮಟ್ಟದಲ್ಲಿ

### ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಹೊಂದಿರಬೇಕಾದ ಕೆಲವು ಲಕ್ಷಣಗಳು/ಗುಣಗಳು

ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರಾಗಿ ಆಯ್ಕೆಯಾದವರು ಸಮರ್ಥ ಹಾಗೂ ತನ್ನಲ್ಲಿ ಪರಿಣಾಮಕಾರಿ ಸಂಯೋಜಕನ ಮತ್ತು ಒಳ್ಳೆಯ ಮಾರ್ಗದರ್ಶಕನ ಗುಣಗಳನ್ನು ಬೆಳೆಸಿಕೊಳ್ಳುವ ವ್ಯಕ್ತಿಯಾಗಿರಬೇಕು. ವಾಸ್ತವವಾಗಿ ಇಲ್ಲಿ ಪಟ್ಟಿ ಮಾಡಿರುವ ಇಕೋ–ಕ್ಲಬ್ ನೋಡಿಕೊಳ್ಳುವ ಶಿಕ್ಷಕರ ವೈಶಿಷ್ಟ್ಯಗಳು, ಲಕ್ಷಣಗಳು, ಮುಖ್ಯವಾಗಿ ಶಿಕ್ಷಕರೇ ಸಂದರ್ಭಾನುಸಾರ ಹಂಚಿಕೊಂಡಿರುವುಗಳಾಗಿವೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ.

- ಕಲಿಯುವವರ ಸಾಮರ್ಥ್ಯದ ಮೇಲೆ ಮಾರ್ಗದರ್ಶಕರಿಗೆ ಬಲವಾದ ನಂಬಿಕೆ ಇರಬೇಕು.
- ಉತ್ತಮ ಕೇಳುಗನಾಗಿರಬೇಕು.
- ತಾನು ಹೇಳುವ ಮತ್ತು ಮುನ್ನಡಿಸಿಕೊಂಡು ಹೋಗುತ್ತಿರುವ ವಿಷಯದ ಬಗ್ಗೆ ಉತ್ತಮ ತಿಳುವಳಿಕೆಯುಳ್ಳವನಾಗಿರಬೇಕು.
- ವಿಷಯದ ಪರಿಕಲ್ಪನೆಗಳನ್ನು ತಿಳಿಸುವಲ್ಲಿ ಸರಳ ಭಾಷೆ ಮತ್ತು ಸ್ಥಳೀಯ ಉದಾಹರಣೆಗಳನ್ನು ಬಳಸುವುದು.

- ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ನೇರ, ಪ್ರಾಮಾಣಿಕ ಮತ್ತು ತೆರೆದ ಮನಸ್ಸಿನವರಾಗಿರಬೇಕು.
- ವೈಯಕ್ತಿಕವಾಗಿ ಎಲ್ಲ ವಿದ್ಯಾರ್ಥಿಗಳ ಕಡೆ ಗಮನಹರಿಸುವಂತಹ ಅರ್ಹತೆಯನ್ನು ಹೊಂದಿರಬೇಕು.
- ಕಲಿಯುವವರ ಅಭಿಪ್ರಾಯಗಳನ್ನು, ದೃಷ್ಟಿಕೋನಗಳನ್ನು ಗೌರವಿಸುವಂತವರಾಗಿರಬೇಕು.
- ನೇರವಾಗಿ ಉತ್ತರ ಕೊಡುವುದನ್ನು ತಪ್ಪಿಸಿ, ಆದರೆ ಕಲಿಯುವವರಿಂದ ಉತ್ತರಗಳನ್ನು ಪಡೆಯುವ ಪ್ರಶ್ನೆಗಳನ್ನು ಹಾಕಬೇಕು.
- ಕಲಿಯುವವರ ಕೊಡುಗೆಯನ್ನು ಗುರುತಿಸಿ ಮೆಚ್ಚಿಕೊಳ್ಳಬೇಕು ಮತ್ತು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮೌಲ್ಯವರ್ಧನೆ (ಅಂದರೆ ಕಲಿಕೆಯವ ಮೌಲ್ಯವರ್ಧನೆ) ಮಾಡಬೇಕು.
- ಯಾವುದೇ ವಿಷಯದ ಬಗ್ಗೆ ವಿದ್ಯಾರ್ಥಿಗಳಿಂದ ಬರುವ ಭಿನ್ನ ಅಭಿಪ್ರಾಯಗಳನ್ನು, ವಿಭಿನ್ನ ದೃಷ್ಟಿಕೋನಗಳನ್ನು ಗೌರವಿಸಬೇಕು.
- ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಕಲಿಕೆಗೆ ಆಹ್ಲಾದಕರ ಮತ್ತು ಸಂತೋಷಭರಿತ ವೇದಿಕೆ ಸೃಷ್ಟಿಸುವವರಾಗಿರಬೇಕು.
- ಕೊನೆಯಲ್ಲಿ ಒಬ್ಬ ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕ ವಿದ್ಯಾರ್ಥಿಗಳಿಗೆ/ಇಕೋ–ಕ್ಲಬ್ ಸದಸ್ಯರಿಗೆ ಸ್ನೇಹಿತನಾಗಿ, ತತ್ವಜ್ಞಾನಿಯಾಗಿ ಮತ್ತು ಮಾರ್ಗದರ್ಶಕನಾಗಿರಬೇಕು.

## 19.1 ಪ್ರಯೋಗ–1. ಬನ್ನಿ ನಮ್ಮ ಕೈಗುರುತನ್ನು ಗುರುತಿಸೋಣ ಮತ್ತು ಅದನ್ನು ಬೆಳೆಸೋಣ (let's increase our handprints)

- **ಉದ್ದೇಶ:** ಇಕೋ–ಕ್ಲಬ್ ವಿದ್ಯಾರ್ಥಿಗಳು, ವೈಯಕ್ತಿಕ ಮತ್ತು ಕೌಟುಂಬಿಕ ಮಟ್ಟದಲ್ಲಿ, ಅವರ ಪರಿಸರ ಉಳಿಕೆಗಾಗಿ ಕೈಗೊಂಡ ಕ್ರಿಯೆಗಳನ್ನು ಮೌಲ್ಯಮಾಪನ ಮಾಡುವುದು. ಈ ಪ್ರಯೋಗದ ಆಧಾರದ ಮೇಲೆ ಇಕೋ–ಕ್ಲಬ್ ಸದಸ್ಯರ ಹಸ್ತ ಚಿಹ್ನೆಗಳನ್ನು/ಕೈಗುರುತನ್ನು ಗುರುತಿಸಿ (ಅಂದರೆ ಅವರ ಚಟುವಟಿಕೆಗಳ ಮಟ್ಟವನ್ನು ಗುರುತಿಸಿ) ಮುಂದೆ ಅದನ್ನು ಹೆಚ್ಚಿಸುವ ದಾರಿಗಳನ್ನು ರೂಪಿಸುವುದು.
- **ಸಮಯ:** 2 ಗಂಟೆಗಳ ಅಭ್ಯಾಸವಾಗಿದ್ದು, ಕಡ್ಡಾಯವಾಗಿ ಮರು ಮೌಲ್ಯಮಾಪನ ಮಾಡುವ ಮೂಲಕ ಪರಿಸರದ ಬಗ್ಗೆ ಅವರು ಮಾಡಿರುವ ಕ್ರಿಯೆಗಳನ್ನು ಹೆಚ್ಚಿಸುವಂತೆ ಪ್ರೇರೇಪಿಸಿ, ಅವರಿಗೆ ತಮ್ಮ ಕೈ ಗುರುತನ್ನು/ಹಸ್ತ ಚಿಹ್ನೆಯನ್ನು ಹೆಚ್ಚಿಸುವಂತೆ ಸಹಕರಿಸುವುದು.
- **ಬೇಕಾಗುವ ಸಂಪನ್ಮೂಲಗಳು:** ಡ್ರಾಯಿಂಗ್ ಶೀಟ್‌ನಲ್ಲಿ 03 ಗಾತ್ರಗಳಲ್ಲಿರುವ ಹಸ್ತ ಚಿಹ್ನೆಗಳು





## ವಿಧಾನ:

1. ಮೊದಲಿಗೆ ಇದರೊಂದಿಗಿರುವ ಲಗತ್ತನ್ನು (Attachment) ಉಪಯೋಗಿಸಿಕೊಂಡು ಇಕೋ–ಕ್ಲಬ್ ಸದಸ್ಯರಿಗೆ ಮೂರು ಗಾತ್ರದ ಹಸ್ತ ಚಿಹ್ನೆಗಳ ಬಗ್ಗೆ ವಿವರಿಸುವುದು. ನಂತರ ಮೂರು ಗಾತ್ರದ ಹಸ್ತ ಚಿಹ್ನೆಗಳನ್ನು ಬಳಸಿಕೊಂಡು, ಇಕೋ–ಕ್ಲಬ್ ಸದಸ್ಯರಿಗೆ 4/5 ವಿಷಯಾಧಾರಿತ ಪ್ರದೇಶಗಳ ವಿವಿಧ ಸೂಚಕಗಳ ಬಗ್ಗೆ ವಿವರಿಸುವುದು ಮತ್ತು ಅದರ ಮುಖಾಂತರ ಅವರ ಸದ್ಯದಲ್ಲಿಯ ವೈಯಕ್ತಿಕ ಹಸ್ತ ಗುರುತನ್ನು (ವಿವಿಧ ವಿಷಯಾಧಾರಿತ ಸೂಚಕಗಳಲ್ಲಿ ವಿದ್ಯಾರ್ಥಿಗಳು ಮಾಡಿರುವ ಚಟುವಟಿಕೆಗಳನ್ನು ಆಧರಿಸಿ) ಮೌಲ್ಯಮಾಪನ ಮಾಡಬಹುದು. ಒಟ್ಟು ಇಕೋ–ಕ್ಲಬ್ ಸದಸ್ಯರನ್ನು 4 ರಿಂದ 5 ಗುಂಪುಗಳಲ್ಲಿ ವಿಂಗಡಿಸುವುದು (ಪ್ರತಿ ಗುಂಪಿನಲ್ಲಿ 8 ಕ್ಕಿಂತ ಹೆಚ್ಚು ಸದಸ್ಯರಿರದಂತೆ ನೋಡಿಕೊಳ್ಳುವುದು).

2. ಇಕೋ–ಕ್ಲಬ್ ಸದಸ್ಯರಿಗೆ 4/5 ವಿಷಯಾಧಾರಿತ ಪ್ರದೇಶಗಳಲ್ಲಿ ಉಸ್ತುವಾರಿ ಶಿಕ್ಷಕರು ಗುರುತಿಸಿಕೊಂಡ ವಿವಿಧ ಸೂಚಕಗಳನ್ನು ಈ ಮೊದಲೇ ವಿವರಿಸುವುದು, ನಂತರ ಆ ವಿಷಯಗಳಲ್ಲಿ ಅವರು ಕೈಗೊಂಡ ತಮ್ಮ ಅತ್ಯುತ್ತಮ ಕ್ರಿಯೆಗಳನ್ನು/ಚಟುವಟಿಕೆಗಳನ್ನು ವಿವರಿಸಲು ಸಾಧ್ಯ ಎಂಬುದನ್ನು ಆಧರಿಸಿ, ಅವರಿಗೇ ಮೂರರಲ್ಲಿ ಒಂದು ಹಸ್ತ ಚಿಹ್ನೆಯನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸುವುದು.

3. ಒಂದು ಬಾರಿ ಇಕೋ–ಕ್ಲಬ್ ಸದಸ್ಯರೆಲ್ಲ, ತಾವು ಚೆನ್ನಾಗಿ ವಿವರಿಸಬಹುದಾದಂತಹ, ತಾವೇ ಕೈಗೊಂಡ ಪರಿಸರ ಕಾರ್ಯಗಳ (ಈಗಾಗಲೇ ಗುರುತಿಸಿದ ವಿಷಯಾಧಾರಿತ ಪರಿಸರದ ಕ್ರಿಯೆಗಳ ಸೂಚಕಗಳ) ಆಧಾರದ ಮೇಲೆ ಮೂರರಲ್ಲಿ ಒಂದು ಹಸ್ತ ಚಿಹ್ನೆಯನ್ನು ಎತ್ತಿಕೊಂಡ ನಂತರ, ಇಕೋ–ಕ್ಲಬ್ ಸದಸ್ಯರಿಗೆ, ಅವರು ಆಯ್ಕೆ ಮಾಡಿಕೊಂಡ ಹಸ್ತ ಚಿಹ್ನೆಯ ಗಾತ್ರ ಅವರು ಮಾಡಿರುವ ಚಟುವಟಿಕೆಗೆ ಹೇಗೆ ಸೂಕ್ತವಾಗಿದೆ ಎಂಬುದನ್ನು ಚರ್ಚಿಸಲು ತಿಳಿಸುವುದು. ಚರ್ಚೆಯು ಮುಂದುವರೆದು ವಾಗ್ವಾದಕ್ಕೆ ಇಳಿಯಬಹುದು. ಈ ಚರ್ಚೆ ಮತ್ತು ವಾಗ್ವಾದವು ಇಕೋ–ಕ್ಲಬ್ ಸದಸ್ಯರು, ತಮ್ಮ ವೈಯಕ್ತಿಕ ಮತ್ತು ಕುಟುಂಬದ ಮಟ್ಟದಲ್ಲಿ, ಪರಿಸರದ ವಿಷಯವಾಗಿ ಕೈಗೊಂಡ ಚಟುವಟಿಕೆಗಳನ್ನು/ಕ್ರಿಯೆಗಳನ್ನು ಗುರುತಿಸಿ ಅವುಗಳಿಗೆ ಒಂದು ಸ್ಥಾನವನ್ನು ಪಡೆದುಕೊಂಡು, ಒಂದು ಕಲ್ಪನೆ/ಪರಿಕಲ್ಪನೆ ಹೊಂದಲು ಸಾಧ್ಯವಾಗುತ್ತದೆ.

4. ನಂತರ ಗುಂಪಿನ ಸದಸ್ಯರೆಲ್ಲರು ತಮ್ಮ ತಮ್ಮ ಹಸ್ತ ಚಿಹ್ನೆಯ ಗಾತ್ರವನ್ನು ಹೆಚ್ಚಿಸಲು ಇರುವ ಮಾರ್ಗಗಳ ಬಗ್ಗೆ ಚರ್ಚಿಸುವುದು. ಗುಂಪಿನ ಪ್ರತಿಯೊಬ್ಬ ಸದಸ್ಯರು ತಮ್ಮ ಹಸ್ತ ಚಿಹ್ನೆಯ ಗಾತ್ರವನ್ನು ಹೆಚ್ಚಿಸಲು/ವೃದ್ಧಿಗೊಳಿಸಲು ಯೋಜಿಸಿದ ಯೋಜನೆಗಳ ಬಗ್ಗೆ ಗುಂಪಿನಲ್ಲಿ ಹಂಚಿಕೊಳ್ಳುವುದು. ಈ ಒಂದು ವಿಧಾನವು ಮುಂದಿನ ಇಕೋ– ಕ್ಲಬ್ ಸಭೆಗಳಲ್ಲಿ, ಪ್ರತಿಯೊಬ್ಬ ಇಕೋ–ಕ್ಲಬ್ ಸದಸ್ಯರುಗಳ ಹಿಂದಿನ ಕ್ರಿಯೆಗಳನ್ನು ಪರಿಷ್ಕರಿಸುವಲ್ಲಿ ಒಂದು ವೈಯಕ್ತಿಕ ದಾಖಲೆಯಾಗಬಹುದು.

5. ಗುಂಪಿನ ಸದಸ್ಯರಿಗೆ ತಮ್ಮ ತಮ್ಮ ಗುಂಪಿನಲ್ಲಿ ಚರ್ಚಿಸಿದ ವಿಷಯಗಳನ್ನು ಹೋಲಿಕೆ ಮಾಡಿಕೊಳ್ಳಲು ಮತ್ತು ಅವುಗಳನ್ನು ಮೂರು ಹಸ್ತ ಚಿಹ್ನೆಗಳ ಅಡಿಯಲ್ಲಿ ಬರುವಂತೆ ಮೂರು ವಿಧಗಳಲ್ಲಿ ವಿಂಗಡಿಸುವಂತೆ ತಿಳಿಸುವುದು.

6. ಈ ಪ್ರಯೋಗವನ್ನು ಪ್ರತಿ 6 ತಿಂಗಳಿಗೊಮ್ಮೆ ಪುನರಾವರ್ತಿಸುವುದು ಮತ್ತು ವೈಯಕ್ತಿಕವಾಗಿ ಪ್ರತಿಯೊಬ್ಬ ವಿದ್ಯಾರ್ಥಿಗಳ ಹಸ್ತ ಚಿಹ್ನೆಗಳ ಗಾತ್ರಗಳಲ್ಲಿ ಹೇಗೆ ಬದಲಾವಣೆಯಾಗುತ್ತಿದೆ ಎಂಬುದನ್ನು ದಾಖಲೆಯಲ್ಲಿ ನಮೂದಿಸುವುದು.

## ಬದಲಾವಣೆಗಳು/ಮಾರ್ಪಾಟುಗಳು (Extension/Variations):

ಇಕೋ–ಕ್ಲಬ್ ಸದಸ್ಯರು ವೈಯಕ್ತಿಕ ಮತ್ತು ಕೌಟುಂಬಿಕ ಮಟ್ಟದಲ್ಲಿ ಕೈಗೊಂಡ ಚಟುವಟಿಕೆಗಳನ್ನು ಮೌಲ್ಯೀಕರಿಸಲು/ಮಾನ್ಯಮಾಡಲು ಈ ಪ್ರಯೋಗವನ್ನು ಅವರ ಕುಟುಂಬದ ಪಾಲಕರೊಂದಿಗೆ/ಕುಟುಂಬದ ಸದಸ್ಯರೊಂದಿಗೆ ಮಾಡಿಸಬಹುದು. ಈ ಸಂವಹನದಿಂದ ಮೂಡಿ ಬಂದ ಅಭಿಪ್ರಾಯಗಳನ್ನು ದಾಖಲೆಯಲ್ಲಿ ನಮೂದಿಸುವುದು.

ಲಗತ್ತು – 1 ಪ್ರಯೋಗ – 1 ಕ್ಕೆ

## ಹಸ್ತ ಚಿಹ್ನೆ – ಭೂಮಿಯ ಮೇಲಿನ ಒಳ್ಳೆಯ ಜೀವನಶೈಲಿಗಳನ್ನು ಆಯ್ಕೆಮಾಡಿಕೊಳ್ಳಲು

## Hand Print – Choosing lifestyles for wellbeing of life on Earth.

ಪರಿಸರ ಸಂರಕ್ಷಣೆಯ ಅಗತ್ಯತೆಯ ಬಗ್ಗೆ ವಿಶ್ವದಾದ್ಯಂತ ಈಗಾಗಲೇ ಬಹಳಷ್ಟು ಚರ್ಚೆಗಳಾಗಿವೆ ಮತ್ತು ಭೂಮಿಯ ಮೇಲಿನ ಎಲ್ಲ ವಿಧದ ಜೀವರಾಶಿಗಳ ಕ್ಷೇಮಕ್ಕಾಗಿ ನಾವು ಅವಶ್ಯಕವಾಗಿ ತಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಸಾಕಷ್ಟು ಜಾಗೃತಿ ಮೂಡಿಸಿದ್ದು, ಅನೇಕ ರೀತಿಯ ಮಾಹಿತಿಗಳು ಎಲ್ಲ ಕಡೆ ಹರಡಲಾಗಿದೆ




Srija, a 10 years old girl in 2005 from the Holy Mary School in Hyderabad, Andhra Pradesh, India gave her handprint participating in a project, taking action for sustainability.

**ಹೆಜ್ಜೆ ಗುರುತು ಎಂದರೇನು? (What is Footprint?)**

ಎಂಬುದನ್ನು ವಿಶ್ಲೇಷಿಸಲು ಇದನ್ನು ಸರಳವಾಗಿ ಮಾಡಲಾಗಿದೆ

1) ನಾವು ಹೇಗೆ ಜೀವಿಸುತ್ತಿದ್ದೇವೆ?
2) ಬಳಕೆಗೆ ನಮಗಿರುವ ಮಿತಿಗಳು ಯಾವುವು?

"ಹೆಜ್ಜೆ ಗುರುತು" (Footprint) ಈ ಮೇಲಿನ ಪ್ರಶ್ನೆಗಳನ್ನು ಅಳೆಯಲು ಅಭಿವೃದ್ಧಿ ಪಡಿಸಿದ ಒಂದು ಸರಳ ವಿಧಾನವಾಗಿದೆ. "ಹೆಜ್ಜೆ ಗುರುತ" ನ್ನು ಎರಡು ರೀತಿಯಲ್ಲಿ ಅಳೆಯಲಾಗುತ್ತದೆ. ಒಂದು "ಪರಿಸರ ವಿಜ್ಞಾನ/ಜೀವಪರಿಸರದ ಹೆಜ್ಜೆಗುರುತು" (Ecological footprint) ಮತ್ತು "ಇಂಗಾಲದ ಹೆಜ್ಜೆಗುರುತು" (Carbon footprint) Ecological footprint ಇದು ಮನುಷ್ಯನು ಪರಿಸರವನ್ನು ಉಪಭೋಗಿಸುವ/ಬಳಸುವದನ್ನು ಮತ್ತು ಅವನ ಜೀವನ ಶೈಲಿಗಳನ್ನು ಅಳೆಯಲು ಬಳಸುವ ಒಂದು ವಿಧಾನವಾಗಿದೆ ಮತ್ತು ಇದಕ್ಕೆ ವ್ಯತಿರಿಕ್ತವಾಗಿ ನಿಸರ್ಗವು ಮನುಷ್ಯನ ಬಳಕೆಗಾಗಿ/ಉಪಭೋಗಕ್ಕಾಗಿ ಒದಗಿಸಿದ ಸಂಪನ್ಮೂಲಗಳ ಸಾಮರ್ಥ್ಯವನ್ನು ಪರಿಶೀಲಿಸುವುದಾಗಿದೆ. ವೈಯಕ್ತಿಕವಾಗಿ, ಒಂದು ನಗರ ಅಥವಾ ಪಟ್ಟಣ, ರಾಜ್ಯ ಅಥವಾ ದೇಶದ ಮಟ್ಟದಲ್ಲಿ ಬಳಸಲ್ಪಡುತ್ತಿರುವ ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ಮಟ್ಟವನ್ನು ಈ ವಿಧಾನವು (ಹೆಜ್ಜೆಗುರುತು) ಹೇಳುತ್ತವೆ (ಪರಿಸರ ವ್ಯವಸ್ಥೆ/ಜೀವ ಪರಿಸರವು ಪುನರ್ ಉತ್ಪಾದಿಸುವ ಬಳಕೆಯ ಮಿತಿಯೊಳಗೆ). ಇದೇ ನಿಯಮವನ್ನು ಇಂಗಾಲದ ವಿಸರ್ಜನೆ (Carbon Emission) ಅಳತೆಗಾಗಿ ಬಳಸಲಾಗುತ್ತದೆ ಮತ್ತು ಇದಕ್ಕೆ ಕಾರ್ಬನ್ ಹೆಜ್ಜೆ ಗುರುತು ಎಂದು ಕರೆಯುತ್ತಾರೆ.

### What is Hand Print? ಹಸ್ತ ಚಿಹ್ನೆ ಅಥವಾ ಹಸ್ತ ಗುರುತು ಎಂದರೇನು?

- ಹಸ್ತ ಗುರುತು ಅಥವಾ ಹಸ್ತ ಚಿಹ್ನೆಯು ಪರಿಸರದ ಮೇಲೆ ವ್ಯಕ್ತಿಗತ ಮತ್ತು ವ್ಯಕ್ತಿಗಳ ಗುಂಪುಗಳ ಧನಾತ್ಮಕ/ಸಕಾರಾತ್ಮಕ ಕ್ರಿಯೆಗಳನ್ನು ಗುರುತಿಸುವ ಚಿಹ್ನೆ ಅಥವಾ ಸಂಕೇತವಾಗಿದೆ. ಅದೇ ರೀತಿ ಭೂಮಿಯ ಸಂಪನ್ಮೂಲಗಳ ಮೇಲೆ ಇರುವ ಮಾನವನ ಬೇಡಿಕೆಯನ್ನು ಗಮನಿಸುವ ಮಾಪನ, ಪರಿಸರ ವಿಜ್ಞಾನ/ ಜೀವ ಪರಿಸರದ ಹೆಜ್ಜೆ ಗುರುತಾಗಿದೆ. ಒಟ್ಟಾರೆ, "ಹೆಜ್ಜೆ ಗುರುತು" ಇದು ಮನುಷ್ಯನು ನೈಸರ್ಗಿಕ ಸಂಪನ್ಮೂಲ ಹೆಚ್ಚು ಬಳಸಿದಂತೆ, ಅವನ ಹೆಜ್ಜೆ ಗುರುತು ದೊಡ್ಡದಾಗುತ್ತ ಹೋಗುವುದು. ಈ ಕ್ರಿಯೆಯು ಪರಿಸರದ ಬಗ್ಗೆ ಮನುಷ್ಯನ ಕೊಳ್ಳುಬಾಕುತನ ಅಂದರೆ ಅವನ ಋಣಾತ್ಮಕ ವರ್ತನೆಯನ್ನು ಸೂಚಿಸುತ್ತದೆ.
- ಹಸ್ತ ಚಿಹ್ನೆ/ಹಸ್ತ ಗುರುತು ಪ್ರಕೃತಿ ಅಥವಾ ನಿಸರ್ಗದ ಜೊತೆಗೆ ನಮ್ಮ ವರ್ತನೆ ಅಂದರೆ, ನಾವು ಏನನ್ನು ಮಾಡುತ್ತಿದ್ದೇವೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಕಡಿಮೆ ಮಾಡಲು ಏನನ್ನು ಮಾಡಬಹುದು ಎಂಬ ಬದ್ಧತೆಯನ್ನು ಸೂಚಿಸುವ ಚಿಹ್ನೆ ಮತ್ತು ಅಳತೆಯಾಗಿದೆ.

- ಹಸ್ತ ಚಿಹ್ನೆಯು ನಮ್ಮ ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿಯ ಬಗ್ಗೆ ನಾವು ಕೈಗೊಳ್ಳುವ ಧನಾತ್ಮಕ ಕ್ರಿಯೆಗಳನ್ನು ಅಳತೆ ಮಾಡುತ್ತದೆ. ನಾವೂ ಕೂಡಾ ಪರಿಸರ ಮತ್ತು ಒಟ್ಟಾರೆ ಅಭಿವೃದ್ಧಿ ನಡುವೆ ಸಮತೋಲನವನ್ನು ತರುವಲ್ಲಿ, ಪರಿಸರೀಯ ಸಮಸ್ಯೆಗಳನ್ನು ಪರಿಹರಿಸಲು ಅಥವಾ ಬಗೆಹರಿಸುವ ಮೂಲಕ ಒಂದು ಬದಲಾವಣೆಯನ್ನು ಮಾಡಬಹುದು ಎಂಬ ನಂಬಿಕೆಯಿಂದ ಮಾಡಬಹುದಾದ ವೈಯಕ್ತಿಕ ಮತ್ತು ಸಾಮೂಹಿಕವಾಗಿ ಸಂಘಟಿತ ಕ್ರಿಯೆಗಳಾಗಿವೆ.
- ಹಸ್ತ ಚಿಹ್ನೆಯು ವಿವಿಧ ಪರಿಸರ ಶಿಕ್ಷಣ ಕಾರ್ಯಕ್ರಮಗಳಲ್ಲಿ/ಚಟುವಟಿಕೆಗಳಲ್ಲಿ ಭಾಗವಹಿಸುವ ಮಕ್ಕಳೊಂದಿಗೆ ಸಂವಹನ ಕೈಗೊಳ್ಳಲು ಇದೊಂದು ಸರಳ ಮಾರ್ಗವಾಗಿದೆಯಲ್ಲದೆ, ಮಕ್ಕಳು ಪರಿಸರ ಸಂರಕ್ಷಣೆಗಾಗಿ ಏನನ್ನು ಮಾಡುತ್ತಿದ್ದಾರೆ ಎಂಬುದನ್ನು ಮೌಲ್ಯೀಕರಿಸಲು, ನಿರ್ಧರಿಸಲು ಇದು ಸಹಾಯಕವಾಗಿದೆ. ಈ ವಿಧಾನ ಅಥವಾ ಚಿಹ್ನೆಯ ಬಳಕೆಯ ಮೂಲಕ ಇಕೋ–ಕ್ಲಬ್ ಸದಸ್ಯರು ಮುಂದೆ ಹೆಚ್ಚಿನ ಚಟುವಟಿಕೆಗಳ ಕೈಗೊಳ್ಳುವಲ್ಲಿ ಭರವಸೆ ನೀಡುವ ಸಂಕೇತವಾಗಿದೆ.
- ಹಸ್ತ ಚಿಹ್ನೆಯು ಈಗಾಗಲೇ ಕೈಗೊಂಡ ಚಟುವಟಿಕೆಗಳನ್ನು ಅಳೆಯುವ ಹಾಗೂ ಈ ಮೂಲಕ ಭೂಮಿಯ ಮೇಲೆ ನಾವು ಎಷ್ಟರ ಮಟ್ಟಿಗೆ ಸಕಾರಾತ್ಮಕ ಹಸ್ತ ಚಿಹ್ನೆಯನ್ನು ಬಿಟ್ಟಿದ್ದೇವೆ ಎಂಬುದನ್ನು ಅಳೆಯುವ ಸಾಧನವಾಗಿದೆ.

## 19.2 ಪ್ರಯೋಗ 2 – ಬೂದು ಬಣ್ಣದಿಂದ ಹಸಿರಿನೆಡೆಗೆ ಪಯಣ (Journey from Grey to Green)

- **ಉದ್ದೇಶ:** ಇಕೋ–ಕ್ಲಬ್ ಸದಸ್ಯರು ಶಾಲಾ ಮಟ್ಟದಲ್ಲಿ ಅವರ ಪರಿಸರ ಉಳಿಕೆಗೆ ಕೈಗೊಂಡ ಚಟುವಟಿಕೆಗಳನ್ನು, ಕ್ರಿಯೆಗಳನ್ನು ಮೌಲ್ಯಮಾಪನ ಮಾಡುವುದಕ್ಕೆ ಈ ಪ್ರಯೋಗವು ಸಹಾಯಕವಾಗಿದೆ. ಅಲ್ಲದೆ, ಇಕೋ–ಕ್ಲಬ್ ಸದಸ್ಯರು ಈಗಾಗಲೇ ತಮ್ಮ ಶಾಲೆಗಳಲ್ಲಿ ಮಾಡಿದ ಚಟುವಟಿಕೆಗಳಲ್ಲದೆ, ಮುಂದೆ ಇತರೆ ಉತ್ತಮ ಮಟ್ಟದ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಕೂಡಾ ಈ ಪ್ರಯೋಗ ಸಹಕಾರಿಯಾಗಿದೆ.
- **ಸಮಯ:** 2 ಗಂಟೆಗಳು ಮತ್ತು ತಿಂಗಳಿಗೊಮ್ಮೆ ಪುನರಾವರ್ತಿಸುವುದು.
- **ಬೇಕಾಗುವ ಸಾಮಗ್ರಿಗಳು:** ಒಂದೇ ಗಾತ್ರದಲ್ಲಿ ಕತ್ತರಿಸಿದ ಮೂರು ಬಣ್ಣಗಳ ಕಾಗದಗಳು (ಬೂದು ಬಣ್ಣ, ಕಂದು ಬಣ್ಣ ಮತ್ತು ಹಸಿರು ಬಣ್ಣ)
- ಇಕೋ–ಕ್ಲಬ್ ಸದಸ್ಯರಿಗೆ ಈ ಪ್ರಯೋಗದ ಪರಿಕಲ್ಪನೆಯ ಮೂಲಕ ಶಾಲೆಯು ಎಷ್ಟು "ಹಸಿರಾಗಿದೆ" ಎಂಬುದನ್ನು ನಿರ್ಧರಿಸಲು ಅಥವಾ ಮೌಲ್ಯಮಾಪನ ಮಾಡಿಕೊಳ್ಳಲು ಸಹಾಯಕವಾಗಿದೆ. ಇದರೊಂದಿಗೆ, ಇಲ್ಲಿ "ಹಸಿರು ಶಾಲೆ" ಎಂಬ ಪದವನ್ನು ಆ ಶಾಲೆಯಲ್ಲಿರುವ ಗಿಡಮರಗಳನ್ನು ಆಧರಿಸಿ ನಿರ್ಧರಿಸದೇ, ಶಾಲೆಯಲ್ಲಿ ಒಟ್ಟಾರೆ ಪರಿಸರದ ಸನ್ನಿವೇಶಗಳಾದ ನೀರಿನ ಬಳಕೆ, ಶಕ್ತಿಯ ಬಳಕೆ, ತ್ಯಾಜ್ಯ ನಿರ್ವಹಣೆ, ಭೂಮಿಯ ಬಳಕೆ, ನೈರ್ಮಲ್ಯ ಈ ಎಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸುವುದು. ಈ ವಿಷಯವನ್ನು ಇಕೋ–ಕ್ಲಬ್ ಸದಸ್ಯರಿಗೂ ಹಾಗೂ ಶಾಲೆಯ ಇತರ ಸಿಬ್ಬಂದಿಗಳಿಗೂ ವಿವರಿಸುವುದು.

### Some Indicators for a Green School

**ಒಂದು ಹಸಿರು ಶಾಲೆಯಾಗಿರಬೇಕಾದರೆ ಇರಬೇಕಾದ ಕೆಲವು ಸೂಚಕಗಳು**

- Water quality – ಶಾಲೆಯಲ್ಲಿ ಬಳಕೆಯಾಗುತ್ತಿರುವ ನೀರಿನ ಗುಣಮಟ್ಟ
- Waste Management – ಶಾಲೆಯಲ್ಲಿ ತ್ಯಾಜ್ಯ ನಿರ್ವಹಣೆ
- Tree Cover – ಮರಗಳ ರಕ್ಷಣೆ
- Various sources of energy being used activities/actions – ಶಾಲೆಯಲ್ಲಿ ಶಕ್ತಿಯ ವಿವಿಧ ಮೂಲಗಳ ಬಳಕೆಗೆ ಕೈಗೊಂಡ ಚಟುವಟಿಕೆಗಳು/ಕ್ರಮಗಳು
- Awareness of surrounding – ಇಕೋ–ಕ್ಲಬ್ ಸದಸ್ಯರಿಗೆ ಶಾಲೆಯ ಸುತ್ತಮುತ್ತಲಿನ ಪರಿಸರದ ಬಗ್ಗೆ ಇರುವ ಅರಿವು
- Learning resources on environment – ಶಾಲೆಯಲ್ಲಿ ಪರಿಸರದ ಬಗ್ಗೆ ಕಲಿಕೆಗಾಗಿ ತಯಾರಿಸಲ್ಪಟ್ಟ ಕಲಿಕಾ ಸಂಪನ್ಮೂಲಗಳು.

ಇಕೋ-ಕ್ಲಬ್ ಸದಸ್ಯರಿಗೆ "ಹಸಿರು ಶಾಲೆ" ಎಂದರೇನು? ಹಸಿರು ಶಾಲೆಯ ಬಗ್ಗೆ ಅವರು ಹೇಳುವ ವಿಷಯಗಳನ್ನು ಮೇಲೆ ಸೂಚಿಸಿದ 4/5 ವಿಷಯಾಧಾರಿತ ಪ್ರದೇಶದಲ್ಲಿಯ ಕೆಲವು ಮಾನದಂಡಗಳನ್ನು ಆಧರಿಸಿ ಕ್ರೋಢೀಕರಿಸುವುದು.

ಪ್ರತಿಯೊಂದು ಮಾನದಂಡಕ್ಕೆ ಯಾವ ಸೂಚಕಗಳನ್ನು (Indicators) ಗುರುತಿಸುತ್ತಾರೆ? ಪ್ರತಿಯೊಂದು ವಿಷಯಾಧಾರಿತ ಮಾನದಂಡಕ್ಕೆ ಸೂಚಕಗಳನ್ನು ಈ ಕೆಳಗಿನ ಉದಾಹರಣೆಯಲ್ಲಿ ತಿಳಿಸಿದಂತೆ ಕೊಡುವುದು.

- ಉದಾಹರಣೆಗೆ ತಾಪಮಾನವು ಕಾಯಿಲೆ/ಸೋಂಕಿಗೆ ಒಂದು ಸೂಚಕವಾಗಿದೆ. ಇದೇ ರೀತಿಯಾಗಿ ಇಕೋ-ಕ್ಲಬ್ ಸದಸ್ಯರಿಗೆ ಅವರ ದಿನನಿತ್ಯದ ಜೀವನದಿಂದ ಈ ರೀತಿಯ ಅನೇಕ ಇತರೆ ಸೂಚಕಗಳನ್ನು ಕುರಿತು ಮಾತನಾಡುವಂತೆ ಪ್ರೇರೇಪಿಸುವುದು. (ಉದಾಹರಣೆಗೆ ನೀರಿನ ಬಣ್ಣವು ಅದರ ಶುದ್ಧತೆಯ ಮಟ್ಟವನ್ನು ಸೂಚಿಸುತ್ತದೆ). ಇದೇ ರೀತಿಯಾಗಿ ಇಕೋ-ಕ್ಲಬ್ ಸದಸ್ಯರು ಸೂಚಿಸಿದ ಸೂಚಕಗಳನ್ನು ಈಗಾಗಲೇ ಗುರುತಿಸಿದ ವಿಷಯಾಧಾರಿತ ಮಾನದಂಡಗಳ ಎದುರಲ್ಲಿ ಪಟ್ಟಿ ಮಾಡುವುದು.

- ಈಗ, ಒಟ್ಟು ಇಕೋ-ಕ್ಲಬ್ ಸದಸ್ಯರನ್ನು 4 ರಿಂದ 5 ಗುಂಪುಗಳಲ್ಲಿ ವಿಂಗಡಿಸಿ, ಪ್ರತಿಯೊಂದು ಗುಂಪು ಒಂದರಿಂದ ಎರಡು ಮಾನದಂಡಗಳನ್ನು ನಿರ್ವಹಿಸುವಂತೆ ಮಾಡುವುದು. ನಂತರ ಇಕೋ-ಕ್ಲಬ್ ಸದಸ್ಯರಿಗೆ, ವಿಷಯಾಧಾರಿತ ಮಾನದಂಡಗಳಿಗೆ ಹೇಳಿದ ಸೂಚಕಗಳನ್ನು ತಕ್ಕಂತೆ, ಅವರು ಮಾಡಿದ ಚಟುವಟಿಕೆಗಳ ಫಲಿತಾಂಶವನ್ನು ಆಧರಿಸಿ, ಕಡಿಮೆ/ಮಧ್ಯಮ/ಹೆಚ್ಚು ಅಂಕಗಳ ಮೌಲ್ಯಗಳನ್ನು ಬಳಸಿಕೊಂಡು, ಅಂಕಗಳನ್ನು ನೀಡುವಂತೆ ತಿಳಿಸುವುದು. ಅಲ್ಲದೆ ಅವರು ನೀಡಿದ ಅಂಕಗಳಿಗೆ ಕಾರಣಗಳನ್ನು ಪಡೆಯುವುದು. ವಿದ್ಯಾರ್ಥಿಗಳು ಇಲ್ಲಿ ಮಾನದಂಡಗಳಿಗೆ ನೀಡಿದ ಸೂಚಕಗಳನ್ನು ತಲುಪಲು ಅವರು ಕೈಗೊಂಡ ಪ್ರಯತ್ನಗಳು/ಕ್ರಮಗಳನ್ನು, ಸೂಚಕಗಳಿಗೆ ಅವರು ನೀಡಿದ ಅಂಕಗಳೊಂದಿಗೆ ಹೋಲಿಸಬಹುದು.

- ಪ್ರತಿಯೊಂದು ಮಾನದಂಡದ ಎದುರಿನ ಮೌಲ್ಯಾಂಕವನ್ನು ಒಟ್ಟುಗೂಡಿಸುವುದು. ಅವುಗಳನ್ನು ಈ ಕೆಳಗೆ ನೀಡಿದ ಮೂರು ಮಹತ್ವದ ಬಣ್ಣಗಳೊಂದಿಗೆ ಹೊಂದಿಸುವುದು.

| ಕಡಿಮೆ ಅಂಕ | ಮಧ್ಯಮ ಅಂಕ | ಹೆಚ್ಚಿನ ಅಂಕ |
|---|---|---|
| GREY (ಬೂದು) | BROWN (ಕಂದು) | GREEN (ಹಸಿರು) |

- ಒಂದು ವೇಳೆ ಮೇಲಿನ ಮೌಲ್ಯಮಾಪನ ಪ್ರಯೋಗದ ಮುಖಾಂತರ ಶಾಲೆಯು ಕಡಿಮೆ ಅಂಕದಿಂದ ಗ್ರೇ ಅಥವಾ ಬ್ರೌನ್ ನಲ್ಲಿ ಉಳಿದುಕೊಂಡರೆ ಇಕೋ-ಕ್ಲಬ್ ಉಸ್ತುವಾರಿ ಶಿಕ್ಷಕರು, ವಿದ್ಯಾರ್ಥಿಗಳೊಂದಿಗೆ ಶಾಲೆಯನ್ನು ಹೆಚ್ಚಿನ ಅಂಕ ಗಳಿಸಿ "ಗ್ರೀನ್" ಸ್ಥಾನದಲ್ಲಿ ಹೋಗಬೇಕಾದರೆ ಯಾವ ಯಾವ ಚಟುವಟಿಕೆಗಳು, ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಕಾರ್ಯತಂತ್ರವನ್ನು ರೂಪಿಸುವುದು. ಈ ಎಲ್ಲ ವರದಿ ಮತ್ತು ತಯಾರಿಸಿದ ಕಾರ್ಯತಂತ್ರಗಳನ್ನು ಶಾಲೆಯ ಮುಖ್ಯಸ್ಥರ ಎದುರಲ್ಲಿ ಪ್ರಸ್ತುತಪಡಿಸುವುದು.

### ಈ ಪ್ರಯೋಗದಿಂದ ಆದ ಬದಲಾವಣೆಗಳು/ಮಾರ್ಪಾಡುಗಳು: Variation:

- ಇಕೋ-ಕ್ಲಬ್ ಸದಸ್ಯರು, ಶಾಲೆಯ ನಿರ್ವಹಣಾ ಸಮಿತಿ/ಪ್ರಾಂಶುಪಾಲರು/ಮುಖ್ಯ ಶಿಕ್ಷಕರು ಮತ್ತು ಇತರೆ ಶಿಕ್ಷಕರನ್ನು ಈ ಪ್ರಯೋಗದ ಅಡಿಯಲ್ಲಿ ಒಟ್ಟು ತೆಗೆದುಕೊಳ್ಳಲು ಪ್ರಯತ್ನಿಸಿದಂತಾಗುತ್ತದೆ.

- ಈ ಮೇಲಿನ ಪ್ರಯೋಗವು ಇಕೋ-ಕ್ಲಬ್ ಅಡಿಯುಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಶಾಲೆಯ ನಿರ್ವಹಣಾ ಸಮಿತಿ ಮತ್ತು ಶಿಕ್ಷಕರನ್ನು ಇದರಲ್ಲಿ ಭಾಗವಹಿಸುವಂತೆ ಮಾಡುವಲ್ಲಿ ಸಹಕಾರಿಯಾಗಿದೆ.

## ಶಾಲೆಯ ಸ್ವ ಮೌಲ್ಯಮಾಪನಕ್ಕಾಗಿ ಸೂಚಿಸಿದ ನಮೂನೆ

## (Suggestive format for self assessment of the school)

| ಮಾನದಂಡ/Criteria * | ಸೂಚಕ/ (Indicator) /s** | ಮೌಲ್ಯಾಂಕ ಕಡಿಮೆ/ಮಧ್ಯಮ/ ಹೆಚ್ಚು (Score value L / M /H) | ನೀಡಿದ ಮೌಲ್ಯಾಂಕಕ್ಕೆ ಕಾರಣ ಕೊಡುವುದು (Reasons for the score value) | ಷರಾ [ಬಣ್ಣ ಗೊತ್ತುಪಡಿಸುವುದು] Remark (colour Assigned) |
|---|---|---|---|---|
| A:ಶಾಲೆಯಲ್ಲಿ ಹಸಿರು/ಜೀವ ವೈವಿಧ್ಯತೆ ಹೆಚ್ಚಿಸಿರುವುದು (Enhanced greenery/biodiversity) | ....... ....... ....... | | | |
| ಸರಾಸರಿ ಮೌಲ್ಯಾಂಕ (Average score value) | | | | |
| B: ತ್ಯಾಜ್ಯ ನಿರ್ವಹಣೆ (Waste management) | ....... ....... | | | |
| ಸರಾಸರಿ ಮೌಲ್ಯಾಂಕ (Average score value): | | | | |
| C: ಜಲ ಸಂರಕ್ಷಣೆ (Water conservation) | ....... ....... | | | |
| ಸರಾಸರಿ ಮೌಲ್ಯಾಂಕ (Average score value): | | | | |
| D:ಶಕ್ತಿ ಸಂರಕ್ಷಣೆ (Energy conservation) | ....... ....... | | | |
| ಸರಾಸರಿ ಮೌಲ್ಯಾಂಕ (Average score value): | | | | |
| E:ನೈರ್ಮಲ್ಯ (Sanitation) | ....... ....... | | | |
| ಸರಾಸರಿ ಮೌಲ್ಯಾಂಕ (Average score value): | | | | |
| | | | | **TOTAL SCORE VALUE** |

*ಮೇಲೆ ನಮೂದಿಸಿದ ನಮೂನೆಗಳು ಉದಾಹರಣೆಗೆ ಸೂಚಿಸಲಾಗಿದೆ. ಆಯಾ ಶಾಲೆಯು ಇವುಗಳನ್ನು ಬದಲಾಯಿಸಿಕೊಳ್ಳಬಹುದು (The criteria is suggestive and can be changed by the school).

** ಮೇಲೆ ನಮೂದಿಸಿದ ಮಾನದಂಡಗಳಿಗೆ ಇಕೋ–ಕ್ಲಬ್ ವಿದ್ಯಾರ್ಥಿಗಳು, ಅಲ್ಲಿಯ ಉಸ್ತುವಾರಿ ಶಿಕ್ಷಕರ ಮತ್ತು ಈ ಕೈಪಿಡಿಯ ಸಹಾಯದಿಂದ ಪಟ್ಟಿ ಮಾಡುವುದು. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತಮ್ಮ ಪ್ರದೇಶ/ಸಂದರ್ಭಕ್ಕೆ ಮಹತ್ವದ್ದೆಂದೆನಿಸುವ ಸೂಚಕಗಳನ್ನು ಪಟ್ಟಿ ಮಾಡುವಲ್ಲಿ ಸ್ವತಂತ್ರರಾಗಿದ್ದಾರೆ. ಅಲ್ಲದೇ ಸಾಮಾಜಿಕ ಮೌಲ್ಯಗಳನ್ನು ಹೋಲುವ ಸೂಚಕಗಳನ್ನು ಸೇರಿಸಬಹುದಾಗಿದೆ.


**ಬಳಕೆದಾರರಿಗೆ ಸಹಾಯಕವಾಗಿ, ಮೇಲಿನ ಫಾರ್ಮೆಟ್‌ನಲ್ಲಿ ನಮೂದಿಸಿದ ಮಾನದಂಡಗಳಿಗೆ ಸೂಚಿತ ಕೆಲವು ಸೂಚಕಗಳು ಕೆಳಗಿನಂತಿವೆ. ಇದರಂತೆ ಆಯಾ ಮಾನದಂಡಗಳಿಗೆ ಹೆಚ್ಚಿನ ಸೂಚಕಗಳನ್ನು ಗುರುತಿಸಬಹುದು**

- ಪ್ರಭೇದಗಳ ಸಮೃದ್ಧತೆ (Enhanced greenery/biodiversity): ಶಾಲಾ ಆವರಣದಲ್ಲಿರುವ ಒಟ್ಟು ಸಸ್ಯಗಳ ಮತ್ತು ಪಕ್ಷಿ ಪ್ರಬೇಧಗಳ ಸಂಖ್ಯೆ
- ತ್ಯಾಜ್ಯ ನಿರ್ವಹಣೆ (Waste management): ತ್ಯಾಜ್ಯದ ಸಂಗ್ರಹ ಮತ್ತು ಅದನ್ನು ವಿಂಗಡಿಸಿರುವುದು/ಪ್ರತ್ಯೇಕಿಸಿರುವುದು; ತ್ಯಾಜ್ಯದ ಮರುಬಳಕೆ ಮತ್ತು ವಿಲೇವಾರಿ – ತ್ಯಾಜ್ಯದಿಂದ ಮಿಶ್ರಗೊಬ್ಬರದ ತಯಾರಿಕೆ.
- ಜಲ ಸಂರಕ್ಷಣೆ (Water conservation): ಕಾರ್ಯನಿರತವಾಗಿರುವ ಮಳೆ ನೀರು ಕೊಯ್ಲು; ನೀರು ಪೋಲಾಗದಂತೆ ತಡೆದಿರುವುದು, ಶಾಲೆಯಲ್ಲಿ ಯಾವುದೇ ನಲ್ಲಿ ಸೋರಿಕೆಯಾಗದಂತೆ ತಡೆದಿರುವುದು; ಜಲ ಸಂರಕ್ಷಣೆಯ ಸಂದೇಶಗಳನ್ನು ತಯಾರಿಸಿ, ಅದನ್ನು ತಾವೂ ಅನುಸರಿಸಿರುವುದು ಮತ್ತು ಇತರರಿಗೂ ಅನುಸರಿಸಲು ಅನುಕೂಲವಾಗುವಂತೆ ಪ್ರದರ್ಶಿಸಿರುವುದು.
- ಶಕ್ತಿ ಸಂರಕ್ಷಣೆ (Energy conservation): ಸೌರ ಸಕ್ತಿಯ ಬಳಕೆ; ಶಕ್ತಿಯ ದುರ್ಬಳಕೆಯನ್ನು ತಡೆದಿರುವುದು, (ಉದಾಹರಣೆಗೆ ಅವಶ್ಯಕತೆ ಇಲ್ಲದೇ ಇರುವಾಗ ಶಾಲೆಯ ಎಲ್ಲ ವಿದ್ಯುತ್ ದೀಪಗಳು ಮತ್ತು ಫ್ಯಾನ್‌ಗಳನ್ನು ಆರಿಸುವುದು) ವಿದ್ಯುತ್ ಶಕ್ತಿಯ ಬಳಕೆ ಕಡಿಮೆ ಮಾಡುವುದುಕ್ಕೆ CFL ಬಲ್ಬುಗಳ ಬಳಕೆ, ಇಂಧನ ಸಂರಕ್ಷಣೆಯಂತಹ ಅಭ್ಯಾಸವನ್ನು ಪ್ರತಿ ದಿನ ಅಳವಡಿಸಿಕೊಂಡಿರುವುದು. ಸಾಮೂಹಿಕ ವಾಹನಗಳ ಬಳಕೆ ಮತ್ತು ಇಬ್ಬರು ಮೂರು ಜನ ಒಟ್ಟಾಗಿ ಒಂದು ಕಾರ್ ಬಳಕೆಯಂತಹ ಅಭ್ಯಾಸಗಳನ್ನು ಅನುಸರಿಸಿರುವುದು.
- ಶಕ್ತಿ ಸಂರಕ್ಷಣೆ (Energy conservation): ಶಾಲೆಯಲ್ಲಿಯ ಶೌಚಾಲಯಗಳ ಸೌಲಭ್ಯ, ಸುರಕ್ಷಿತ ಕುಡಿಯುವ ನೀರಿನ ಸಂಗ್ರಹಣೆ, ಮಕ್ಕಳ ಕೈ ತೊಳೆಯುವ ಪದ್ಧತಿ ಮತು ಅದರ ಅನುಸರಣೆ ಮತ್ತು ತ್ಯಾಜ್ಯ ನೀರಿನ ಮರುಬಳಕೆ.

## 19.3 ಪ್ರಯೋಗ–3: ನೆರೆಹೊರೆಯನ್ನು ಹಸಿರಾಗಿಸುವುದು. (Greening the Neighbourhood)

- **ಉದ್ದೇಶ:** ಇಕೋ–ಕ್ಲಬ್ ಮಕ್ಕಳು ನೆರೆ ಹೊರೆಯಲ್ಲಿ ಕೈಗೊಂಡ ಚಟುವಟಿಕೆಗಳ ಫಲಿತಾಂಶವನ್ನು ಮೌಲ್ಯಮಾಪನ ಮಾಡುವುದು ಈ ಪ್ರಯೋಗದ ಮುಖ್ಯ ಉದ್ದೇಶವಾಗಿದೆ.
- **ಸಮಯ:** 2 ಗಂಟೆ
- **ಬೇಕಾಗುವ ಸಾಮಗ್ರಿಗಳು:** ಒಂದೇ ಗಾತ್ರದ ಮೂರು ಬಣ್ಣಗಳ ಕತ್ತರಿಸಿದ ಕಾಗದಗಳು (ಬೂದು ಬಣ್ಣ, ಕಂದು ಬಣ್ಣ ಮತ್ತು ಹಸಿರು ಬಣ್ಣ)





## ಶಾಲೆಯ ಸ್ವ ಮೌಲ್ಯಮಾಪನಕ್ಕಾಗಿ ಸೂಚಿಸಿದ ನಮೂನೆ

ಇಕೋ–ಕ್ಲಬ್ ಸದಸ್ಯರಿಗೆ/ನೆರೆಹೊರೆಯವರಿಗೆ ಈ ಪ್ರಯೋಗದ ಪರಿಕಲ್ಪನೆಯ ಮೂಲಕ ತಮ್ಮ ಸುತ್ತ ಮುತ್ತಲಿನ ಪರಿಸರ ಎಷ್ಟು "ಹಸಿರಾಗಿದೆ" ಎಂಬುದನ್ನು ನಿರ್ಧರಿಸಲು ಅಥವಾ ಮೌಲ್ಯಮಾಪನ ಮಾಡಿಕೊಳ್ಳಲು ಸಹಾಯಕವಾಗಿದೆ. ಇದರೊಂದಿಗೆ ಇಲ್ಲಿ "ಹಸಿರು" ಎಂಬ ಪದವನ್ನು ಅಲ್ಲಿಯ ಗಿಡಮರಗಳ ಹಸಿರನ್ನು ಆಧರಿಸಿ ನಿರ್ಧರಿಸದೇ, ಒಟ್ಟಾರೆ ಪರಿಸರದ ಇತರೆ ವಿಷಯಗಳಾದ ನೀರಿನ ಬಳಕೆ ಮತ್ತು ಸಂರಕ್ಷಣೆ, ಶಕ್ತಿಯ ಬಳಕೆ, ತ್ಯಾಜ್ಯ ನಿರ್ವಹಣೆ, ಭೂಮಿಯ ಬಳಕೆ, ನೈರ್ಮಲ್ಯ ನಿರ್ವಹಣೆ ಈ ಎಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸುವುದು.

ಈಗ ಒಟ್ಟು ಇಕೋ–ಕ್ಲಬ್ ಸದಸ್ಯರನ್ನು 4 ರಿಂದ 5 ಗುಂಪುಗಳಲ್ಲಿ ವಿಂಗಡಿಸಿ, ಪ್ರತಿಯೊಂದು ಗುಂಪು ಒಂದರಿಂದ ಎರಡು ಮಾನದಂಡಗಳನ್ನು ನಿರ್ವಹಿಸುವಂತೆ ಮಾಡುವುದು. ನಂತರ ಇಕೋ–ಕ್ಲಬ್ ಸದಸ್ಯರಿಗೆ, ವಿಷಯಾಧಾರಿತ ಮಾನದಂಡಗಳಿಗೆ ಹೇಳಿದ ಸೂಚಕಗಳನ್ನು ತಕ್ಕಂತೆ, ಅವರು ಮಾಡಿದ ಚಟುವಟಿಕೆಗಳ ಫಲಿತಾಂಶವನ್ನು ಆಧರಿಸಿ, ಕಡಿಮೆ/ಮಧ್ಯಮ/ಹೆಚ್ಚು ಅಂಕಗಳ ಮೌಲ್ಯಗಳನ್ನು ಬಳಸಿಕೊಂಡು, ಅಂಕಗಳನ್ನು ನೀಡುವಂತೆ ತಿಳಿಸುವುದು. ಅಲ್ಲದೆ ಅವರು ನೀಡಿದ ಅಂಕಗಳಿಗೆ ಕಾರಣಗಳನ್ನು ಪಡೆಯುವುದು. ವಿದ್ಯಾರ್ಥಿಗಳು ಇಲ್ಲಿ ಮಾನದಂಡಗಳಿಗೆ ನೀಡಿದ ಸೂಚಕಗಳನ್ನು ತಲುಪಲು ಅವರು ಕೈಗೊಂಡ ಪ್ರಯತ್ನಗಳು/ಕ್ರಮಗಳನ್ನು, ಸೂಚಕಗಳಿಗೆ ಅವರು ನೀಡಿದ ಅಂಕಗಳೊಂದಿಗೆ ಹೋಲಿಸಬಹುದು.

ಸಮುದಾಯ ಅಥವಾ ನೆರೆಹೊರೆಯು ಹಸಿರಾಗಿರಬೇಕಾದರೆ ಇರಬೇಕಾದ ಕೆಲವು ಸೂಚಕಗಳು

- (Some indicators for a Green Neighbourhood)
- Water quality
- Waste Management
- Tree Cover
- Various sources of energy being used.

ಪ್ರತಿಯೊಂದು ಮಾನದಂಡ ಎದುರಿನ ಮೌಲ್ಯಾಂಕವನ್ನು ಒಟ್ಟುಗೂಡಿಸುವುದು. ಅವುಗಳನ್ನು ಈ ಕೆಳಗೆ ನೀಡಿದ ಮೂರು ಮಹತ್ವದ ಬಣ್ಣಗಳೊಂದಿಗೆ ಹೊಂದಿಸುವುದು.

| Low Score | Medium Score | High Score |
|---|---|---|
| GREY (ಬೂದು) | BROWN (ಕಂದು) | GREEN (ಹಸಿರು) |

ಒಂದು ವೇಳೆ ಮೇಲಿನ ಮೌಲ್ಯಮಾಪನ ಪ್ರಯೋಗದ ಮುಖಾಂತರ ಸುತ್ತಮುತ್ತಲಿನ ಪರಿಸರವು ಕಡಿಮೆ ಅಂಕದಿಂದ ಗ್ರೇ ಅಥವಾ ಬ್ರೌನ್ ನಲ್ಲಿ ಉಳಿದುಕೊಂಡರೆ ಉಸ್ತುವಾರಿ ಶಿಕ್ಷಕರು, ಇಕೋ–ಕ್ಲಬ್ ವಿದ್ಯಾರ್ಥಿಗಳು, ಪಾಲಕರು, ಸಮುದಾಯದ ಸದಸ್ಯರು ಮತ್ತು ನೆರೆಯ ಶಾಲೆಯ ವಿದ್ಯಾರ್ಥಿಗಳೊಂದಿಗೆ, ಒಟ್ಟಾರೆ ಪರಿಸರವು ಎಲ್ಲ ವಿಷಯಗಳಲ್ಲಿ ಹೆಚ್ಚಿನ ಅಂಕ ಗಳಿಸಿ "ಗ್ರೀನ್" ಸ್ಥಾನದಲ್ಲಿ ಹೋಗಬೇಕಾದರೆ ಯಾವ ಯಾವ ಚಟುವಟಿಕೆಗಳು, ಕ್ರಮಗಳನ್ನು ಕೈಗೊಳ್ಳಬೇಕು/ತೆಗೆದುಕೊಳ್ಳಬೇಕು ಎಂಬ ಕಾರ್ಯತಂತ್ರವನ್ನು ರೂಪಿಸುವುದು/ತಯಾರಿಸುವುದು.

## ಈ ಪ್ರಯೋಗದಿಂದ ಆದ ಬದಲಾವಣೆಗಳು/ಮಾರ್ಪಾಡುಗಳು: Variation:

ಇಕೋ–ಕ್ಲಬ್ ಸದಸ್ಯರು, ಪಾಲಕರು / ಸಮುದಾಯದ ಸದಸ್ಯರು ಮತ್ತು ನೆರೆಯ ಶಾಲೆಯ ವಿದ್ಯಾರ್ಥಿಗಳನ್ನು ಈ ಪ್ರಯೋಗದ ಅಡಿಯಲ್ಲಿ ಒಟ್ಟು ತೆಗೆದುಕೊಳ್ಳಲು ಪ್ರಯತ್ನಿಸಿದಂತಾಗುತ್ತದೆ. ಈ ಮೇಲಿನ ಪ್ರಯೋಗವು ಇಕೋ–ಕ್ಲಬ್ ಅಡಿಯುಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಪಾಲಕರು / ಸಮುದಾಯದ ಸದಸ್ಯರು ಮತ್ತು ನೆರೆಯ ಶಾಲೆಯ ವಿದ್ಯಾರ್ಥಿಗಳನ್ನು ಇದರಲ್ಲಿ ಭಾಗವಹಿಸುವಂತೆ ಮಾಡುವಲ್ಲಿ ಸಹಕಾರಿಯಾಗಿದೆ.


## ನೆರೆಹೊರೆಯಲ್ಲಿ ಕೈಗೊಂಡ ಪರಿಸರದ ಚಟುವಟಿಕೆಗಳ ಮೌಲ್ಯಮಾಪನಕ್ಕಾಗಿ ಸೂಚಿಸಿದ ನಮೂನೆ

## (Suggestive format for self-assessment of neighbourhood)

| ಮಾನದಂಡ/Criteria * | ಸೂಚಕ/ (Indicator) /s** | ಮೌಲ್ಯಾಂಕ ಕಡಿಮೆ/ಮಧ್ಯಮ/ ಹೆಚ್ಚು (Score value L / M /H) | ನೀಡಿದ ಮೌಲ್ಯಾಂಕಕ್ಕೆ ಕಾರಣ ಕೊಡುವುದು (Reasons for the score value) | ಷರಾ [ಬಣ್ಣ ಗೊತ್ತುಪಡಿಸುವುದು] Remark (colour Assigned) |
|---|---|---|---|---|
| A:ಶಾಲೆಯಲ್ಲಿ ಹಸಿರು/ಜೀವ ವೈವಿದ್ಯತೆ ಹೆಚ್ಚಿಸಿರುವುದು (Enhanced greenery/biodiversity) | .......<br>.......<br>....... | | | |
| Average score value | | | | |
| B: ತ್ಯಾಜ್ಯ ನಿರ್ವಹಣೆ (Waste management) | .......<br>....... | | | |
| Average score value | | | | |
| C: ಜಲ ಸಂರಕ್ಷಣೆ (Water conservation) | .......<br>....... | | | |
| Average score value | | | | |
| D:ಶಕ್ತಿ ಸಂರಕ್ಷಣೆ (Energy conservation) | .......<br>....... | | | |
| Average score value | | | | |
| E:ನೈರ್ಮಲ್ಯ (Sanitation) | .......<br>....... | | | |
| Average score value | | | | |
| | | | | TOTAL SCORE VALUE |

*ಮೇಲೆ ನಮೂದಿಸಿದ ನಮೂನೆಗಳು ಉದಾಹರಣೆಗೆ ಸೂಚಿಸಲಾಗಿದೆ. ಆಯಾ ಶಾಲೆಯು ಇವುಗಳನ್ನು ಬದಲಾಯಿಸಿಕೊಳ್ಳಬಹುದು (The criteria is suggestive and can be changed by the school).

** ಮೇಲೆ ನಮೂದಿಸಿದ ಮಾನದಂಡಗಳಿಗೆ ಇಕೋ–ಕ್ಲಬ್ ವಿದ್ಯಾರ್ಥಿಗಳು, ಅಲ್ಲಿಯ ಉಸ್ತುವಾರಿ ಶಿಕ್ಷಕರ ಮತ್ತು ಈ ಕೈಪಿಡಿಯ ಸಹಾಯದಿಂದ ಪಟ್ಟಿ ಮಾಡುವುದು. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತಮ್ಮ ಪ್ರದೇಶ/ಸಂದರ್ಭಕ್ಕೆ ಮಹತ್ವದ್ದೆಂದೆನಿಸುವ ಸೂಚಕಗಳನ್ನು ಪಟ್ಟಿ ಮಾಡುವಲ್ಲಿ ಸ್ವತಂತ್ರರಾಗಿದ್ದಾರೆ. ಅಲ್ಲದೇ ಸಾಮಾಜಿಕ ಮೌಲ್ಯಗಳನ್ನು ಹೋಲುವ ಸೂಚಕಗಳನ್ನು ಸೇರಿಸಬಹುದಾಗಿದೆ.




ಮಕ್ಕಳಿಂದ " ಕಸದಿಂದ ರಸ" ಹಾಗು ಚಿತ್ರಕಲೆ

## ಸಂಪರ್ಕ ವಿಳಾಸ:

**ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ**
(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ)
"ಹಸಿರು ಭವನ", ದೊರೆಸಾನಿಪಾಳ್ಯ ಅರಣ್ಯ ಪ್ರದೇಶ
ವಿನಾಯಕನಗರ ವೃತ್ತ, ಜೆ.ಪಿ.ನಗರ 5ನೇ ಹಂತ
ಬೆಂಗಳೂರು – 560078
ದೂರವಾಣಿ: 080 26490746/47
ಫ್ಯಾಕ್ಸ್: 080 26490745
ಇ–ಮೇಲ್: empri.blr@gmail.com
ಜಾಲತಾಣ: https://empri.karnataka.gov.in/

**ಮತ್ತು**

**ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಯೋಜನಾ ಕಛೇರಿ**
(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ)
ರಾಷ್ಟ್ರೀಯ ಹಸಿರು ಪಡೆ ವಿಭಾಗ
ಬೆಂಗಳೂರು ಜಲಮಂಡಳಿ (ಸಿಜೆಎಫ್ ಆವರಣ),
18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560 055.
ದೂರವಾಣಿ: 080 23460744
ಇ–ಮೇಲ್: empri.ngc@gmail.com
ngc-empri@karanataka.gov.in
ಜಾಲತಾಣ: https: //ngc.karnataka.gov.in/
**NGCEMPRI**
**NGCKarnataka**
**ngckarnataka**